# 5

# “ಅವನಿಗಿದ್ದ ಎಲ್ಲವನ್ನೂ”

## (ಮತ್ತಾಯ 13:44-46)

ಪ್ರಸಂಗಿಸುವ ನಮ್ಮಲ್ಲಿ ಹೆಚ್ಚಾದವರಿಗೆ ಅತೀ ಚಿಕ್ಕ ಸತ್ಯವನ್ನು ತೆಗೆದುಕೊಂಡು ಉದ್ದವಾದ ಪ್ರಸಂಗವಾಗಿ ಬೆಳೆಸುವ ಸಾಮರ್ಥ್ಯವು ಇದೆ. ಇನ್ನೊಂದು ಕಡೆಯಲ್ಲಿ ಯೇಸು ಅಗಾಧವಾದ ಸತ್ಯಗಳನ್ನು ತೆಗೆದುಕೊಂಡು, ಅವುಗಳನ್ನು ಚಿಕ್ಕದಾದ, ಬಲವುಳ್ಳ ಹೇಳಿಕೆಗಳಾಗಿ ಇಡುತ್ತಾರೆ.

ಈ ಪಾಠದಲ್ಲಿ ಎರಡು ಚಿಕ್ಕವಾದ, ಬಲದಿಂದ ತುಂಬಿದ ಯೇಸುವಿನ ಹೇಳಿಕೆಗಳನ್ನು - ಮೂರೇ ವಚನಗಳಲ್ಲಿರುವ ಎರಡು ಸಾಮ್ಯಗಳನ್ನು ನಾವು ಅಧ್ಯಯನ ಮಾಡೋಣ:

> ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವಕ್ಕೆ ಹೋಲಿಕೆಯಾಗಿದೆ. ಒಬ್ಬನು ಅದನ್ನು ಕಂಡುಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡು ಕೊಂಡನು.
>
> ಮತ್ತು ಪರಲೋಕ ರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪಾರಸ್ಥನಿಗೆ ಹೋಲಿಕೆ ಯಾಗಿದೆ. ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು ತನ್ನ ಬದುಕನ್ನೆಲ್ಲಾ ಮಾರಿ ಬಂದು ಅದನ್ನು ಕೊಂಡುಕೊಂಡನು (ಮತ್ತಾಯ 13:44-46).

## ರಾಜ್ಯದ ಮೌಲ್ಯ

### ಹೂಳಿಟ್ಟ ದ್ರವ್ಯದ ಸಾಮ್ಯ

ಮತ್ತಾಯ 13:44, “ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆ ಯಾಗಿದೆ” ಎಂಬ ಮಾತುಗಳಿಂದ ಪ್ರಾರಂಭವಾಗುತ್ತದೆ. ಹೊಲದಲ್ಲಿ ಹೂಳಿಟ್ಟ ದ್ರವ್ಯದ ವಿಚಾರವು ನಮಗೆ ವಿಚಿತ್ರವಾಗಿರಬಹುದು. ಆದರೆ ಯೇಸುವಿನ ಶತ್ರುಗಳು ತಮ್ಮ ತಲೆಗಳನ್ನು ಅಲ್ಲಾಡಿಸಿರಬಹುದು. ಆ ದಿನಗಳಲ್ಲಿ ಹಣವನ್ನಾಗಲಿ ಇಲ್ಲವೇ ಬೆಲೆಯುಳ್ಳ ವಸ್ತುಗಳನ್ನಾಗಲಿ ಒಬ್ಬನು ಬ್ಯಾಂಕಿನಲ್ಲಿಟ್ಟರೆ[1] ಅವನು ಅದನ್ನು ಹೊರಗೆ ತೆಗೆದುಕೊಳ್ಳಲು ಹೋಗುವಾಗ ಅದು ಅಲ್ಲಿರಬಹುದು ಅಥವಾ ಇಲ್ಲದೇ ಇರಬಹುದಿತ್ತು, ಆದುದರಿಂದ ಅನೇಕರು ತಮ್ಮ ಬೆಲೆಯುಳ್ಳ ವಸ್ತುಗಳನ್ನು ಭೂಮಿಯಲ್ಲಿ ಅಡಗಿಸಿಡುತ್ತಿದ್ದರು (ಮತ್ತಾಯ 25:18ರಲ್ಲಿ ಒಂದು ತಲಾಂತು ಹೊಂದಿದವನು ಮಾಡಿದಂತೆ).[2]

ಕೆಲವರು ತಮ್ಮ ದ್ರವ್ಯವನ್ನು ಭೂಮಿಯಲ್ಲಿ ಯಾಕೆ ಅಡಗಿಸಿಡುತ್ತಿದ್ದರೆಂಬುದಕ್ಕೆ ಇನ್ನೊಂದು ಕಾರಣವಿದೆ. ಆ ವಿಭಾಗವು ಯಾವುದೇ ಸಮಯದಲ್ಲಿ ದಾಳಿಗೆ ಒಳಪಡಬಹುದಿತ್ತು. ಪಲೆಸ್ತೀನವು ಐಗುಪ್ತ ಹಾಗೂ ಮೆಸೊಪೊಟೆಮಿಯದ ಮಧ್ಯ ದಲ್ಲಿತ್ತು. ಹಿಂದಿನ ಕಾಲದಲ್ಲಿ ಬಹಳ ಸಲ ದಾಳಿಮಾಡುವ ಸೈನ್ಯಗಳು ಅದರಲ್ಲಿ ಹಾದು ಹೋಗುತ್ತಿದ್ದವು. ಪಲೆಸ್ತೀನದಲ್ಲಿಯಂತೆ ಬೇರೆಯಾವುದೇ ಸ್ಥಳದ ಮೇಲೆ ಯುದ್ಧಗಳಾಗಿ

ರುವದಿಲ್ಲ. ಅನೇಕ ಐಶ್ವರ್ಯವಂತರು ತಮ್ಮ ಐಶ್ವರ್ಯವನ್ನು ಮೂರು ಭಾಗಗಳಾಗಿ ವಿಭಾಗಿಸು ವದರಿಂದ ದಾಳಿಗಾಗಿ ತಮ್ಮನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಮೂರರಲ್ಲಿ ಒಂದು ಭಾಗವನ್ನು ತಮ್ಮ ವ್ಯವಹಾರದ ಬಂಡವಾಳವಾಗಿ ಉಪಯೋಗಿಸುತ್ತಿದ್ದರು. ಇನ್ನೊಂದು ಭಾಗವನ್ನು ಸುಲಭವಾಗಿ ತೆಗೆದು ಕೊಂಡು ಹೋಗಲು ಬರುವಂತೆ ಆಭರಣಗಳಲ್ಲಿ ಹಾಗೂ ಇತರ ವಸ್ತುಗಳಲ್ಲಿ ಹಾಕುತ್ತಿದ್ದರು. ದಾಳಿ ಮಾಡುವವರಿಂದ ತಪ್ಪಿಸಿಕೊಳ್ಳು ವಾಗ ಇವುಗಳನ್ನು ಕೂಡಿಸಿಕೊಂಡು ತಮ್ಮೊಂದಿಗೆ ತೆಗೆದು ಕೊಂಡು ಓಡಿ ಹೋಗು ತ್ತಿದ್ದರು. ಉಳಿದ ಮೂರನೆಯ ಭಾಗವನ್ನು ಭೂಮಿಯಲ್ಲಿ ಹೂಳಿಡುತ್ತಿದ್ದರು. ಯುದ್ಧ ಮುಗಿದು ಅವರು ಹಿಂದಿರುಗಿ ಬಂದಾಗ ಇದು ಅವರಿಗೆ ಉಪಯೋಗಿಸಲು ಮುಖ್ಯ ಬಂಡವಾಳ ಆಗುತ್ತಿತ್ತು. ಕೆಲವು ಸಲ ಅವರು ಹಿಂದಿರುಗಿ ಬರುತ್ತಲೇ ಇರಲಿಲ್ಲ. ಹೀಗೆ ಪಲೆಸ್ತೀನದಲ್ಲೆಲ್ಲ ಭೂಮಿಯಲ್ಲಿ ದ್ರವ್ಯಗಳು ಹೂಣಿಡಲ್ಪಡುತ್ತಿದ್ದವು.

ಯೇಸುವಿನ ಸಾಮ್ಯವು ಹೂಳಿಟ್ಟ ದ್ರವ್ಯದ ಬಗ್ಗೆ ಇತ್ತು. ಹೂಳಿಟ್ಟ ದ್ರವ್ಯದ ವಿಚಾರವು ನಮ್ಮನ್ನು ಮರುಳುಗೊಳಿಸುತ್ತದೆ. ಜಗತ್ತಿನ ಪ್ರತಿಯೊಂದು ಭಾಗದಲ್ಲಿ ಹೂಳಿಟ್ಟ ದ್ರವ್ಯದ ಬಗ್ಗೆ ದಂತಕಥೆಗಳಿವೆ - ಹಡಗುಗಳ್ಳರ ದ್ರವ್ಯ, ಮುಳುಗಿ ಹೋದ ಹಡುಗುಗಳಲ್ಲಿಯ ದ್ರವ್ಯ ಇಲ್ಲವೇ ಕಳೆದು ಹೋದ ಬಂಗಾರದ ಗಣಿಗಳು. ಇತ್ತೀಚೆಗೆ ಟೆಕ್ಸಾಸದ ವ್ಯಾಕೋದಲ್ಲಿ ಇಬ್ಬರು ಪುರುಷರು ತಮ್ಮ ಪ್ರದೇಶದಲ್ಲಿ ಜೆಸ್ಸೆ ಜೇಮ್ಸ ಎಂಬವನು[3] ಹಣ ಮತ್ತು ಇತರ ಬೆಲೆಯುಳ್ಳ ವಸ್ತುಗಳಿಂದ ತುಂಬಿದ ಪೆಟ್ಟಿಗೆಯನ್ನು ಹೂಳಿಟ್ಟಿದ್ದಾನೆಂಬುದರ ಬಗ್ಗೆ ಖಚಿತ ಮಾಹಿತಿ ಪಡೆದು ಕೊಂಡರು. ಅವರು ಬುಲ್‌ಡೋಜರ ಆಪರೇಟರನ ಮೇಲ್ವಿಚಾರಣೆ ಮಾಡುತ್ತ ಎಲ್ಲಿ ಅಗೆಯಬೇಕೆಂಬುದನ್ನು ಅವನಿಗೆ ಹೇಳುತ್ತಿರುವದನ್ನು ಒಂದು ಟಿ.ವಿ. ವರದಿ ತೋರಿಸಿತು. ನಾನು ಕೊನೆಯ ಸಲ ಕೇಳಿದ್ದು ಅವರು ತಮ್ಮ ಅಗೆಯುವ ಯೋಜನೆಗೆ 140,000 ಖರ್ಚು ಮಾಡಿದ್ದು ಹಾಗೂ ಅದಕ್ಕಾಗಿ ಅವರು ತೋರಿಸಿದ್ದು ಒಂದು ದೊಡ್ಡ ರಂಧ್ರವನ್ನು.[4]

ಯೇಸುವಿನ ಸಾಮ್ಯವು ಕೇವಲ ಹೂಳಿಟ್ಟ ದ್ರವ್ಯದ ಬಗ್ಗೆ ಇರಲಿಲ್ಲ: ಅದು ಕಂಡುಕೊಂಡ ಹೂಳಿಟ್ಟ ದ್ರವ್ಯದ ಬಗೆಗಿತ್ತು. “ಒಬ್ಬನು ಅದನ್ನು ಕಂಡುಕೊಂಡು ಮಚ್ಚಿಬಿಟ್ಟು, ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡು ಕೊಂಡನು” (ವ. 44ಬಿ).

ಈ ಮನುಷ್ಯನು ಬಡವನಾಗಿದ್ದನೆಂದು ನಾವು ಭಾವಿಸಬಹುದು. ಅವನು ಕೆಲಸ ಮಾಡುತ್ತಿದ್ದ ಹೊಲವು ಅವನ ಸ್ವಂತದ್ದಾಗಿರಲಿಲ್ಲ. ಅವನು ಸಾಮಾನ್ಯ ಕೆಲಸದವನಾ ಗಿದ್ದನು: ಹೊಲದ ಯಜಮಾನನ ಸೇವಕನೂ ಆಗಿದ್ದರಬಹುದು. ದೃಶ್ಯವು ಈ ರೀತಿ ಯಲ್ಲಿ ಹೋಗಿರಬಹುದು: ಆ ಮನುಷ್ಯನು ಹೊಲದಲ್ಲಿ ಅಗೆಯುತ್ತ ಇಲ್ಲವೇ ನಾಗಿಲು ಹೊಡೆಯುತ್ತ ಮೆಲ್ಲನೆ ಚಲಿಸುತ್ತಿರಬೇಕು. ಅವನ ಮುಖದ ಮೇಲೆ ನಿರೀಕ್ಷೆಯಿರಲಿಲ್ಲ. ಈ ದಿನವೂ ನಿನ್ನೆಯ ದಿನದಂತೆ ಇತ್ತು. ಇಂದಿನ ದಿನದ ಹಾಗೆಯೇ ನಾಳೆಯ ದಿನವೂ ಇರಬಹುದು. ಅವನ ಜೀವಿತವು ಕಠಿಣವಾದ ಕೆಲಸ, ಕನಸುಗಳಿಲ್ಲದ ನಿದ್ರೆ, ಕಠಿಣವಾದ ಕೆಲಸ, ಕನಸುಗಳಿಲ್ಲದ ನಿದ್ರೆ ಈ ಚಕ್ರ ಮುಗಿಯದಂತೆ ಉರುಳುತ್ತಿತ್ತು.

ಆದರೆ ಈ ದಿನ ಅವನ ಸಲಕರಣೆಯು ಭೂಮಿಯನ್ನು ಅಗೆದಾಗ ಒಂದು ಶಬ್ದ ವಾಯಿತು. “ಬಹುಶಃ ಒಂದು ಬಂಡೆಯಿರ ಬೇಕು” ಎಂದು ಅವನು ಯೋಚಿಸಿದನು. ಹೊಲದಲ್ಲಿಯ ಎಲ್ಲಾ ಕಲ್ಲುಗಳನ್ನು ಹೊರಗೆ ಎಸೆಯಬೇಕೆಂದು ಅವನ ಯಜಮಾನನು ಅವನಿಗೆ ಹೇಳಿದ್ದನು. ಅವನು ಸ್ವಲ್ಪ ನರಳುತ್ತ ಮೊಣಕಾಲೂರಿ ಮಣ್ಣಿನಲ್ಲಿ ತನ್ನ ಕೈಬೆರಳುಗಳಿಂದ ಮಣ್ಣನ್ನು ತೆಗೆಯಲು ಪ್ರಾರಂಭಿಸಿದನು. ಭೂಮಿಯಲ್ಲಿದ್ದ ಈ ವಸ್ತು ಕಲ್ಲಿನಂತೆ ಕಂಡು ಬರಲಿಲ್ಲ. ಅದು ಸಮಕೋನಾ ಕೃತಿಯಲ್ಲಿ ಇದ್ದ ಪೆಟ್ಟಿಗೆಯಾಗಿತ್ತು.

ಅವನು ಅದರ ಮೇಲಿನ ಧೂಳನ್ನು ಒರೆಸುವಾಗ ಅವನ ಹೃದಯ ಬಡಿದುಕೊಳ್ಳಲು ಪ್ರಾರಂಭವಾಯಿತು. ಅದರ ಮುಚ್ಚಳ ತೆರೆದಾಗ, ಅದು ನಾಣ್ಯಗಳಿಂದಲೂ ಆಭರಣಗಳಿಂದಲೂ ಅವನು ಕಲ್ಪಿಸಿದ್ದಕ್ಕಿಂತ ಹೆಚ್ಚು ನಿಧಿಯನ್ನು ಒಳಗೊಂಡಿರುವುದನ್ನು ಕಂಡನು.

ಸುತ್ತಲೂ ನೋಡಿದನು ಸಮೀಪದಲ್ಲಿ ಯಾರೂ ಇರಲಿಲ್ಲ. ಅವನು ಪೆಟ್ಟಿಗೆಯನ್ನು ಮುಚ್ಚಿ ಬೇಗನೇ ತಗ್ಗಿನಲ್ಲಿ ಅಡಗಿಸಿಟ್ಟನು. “ನಾನೇನು ಮಾಡಲಿ?” ಎಂದು ಆಶ್ಚರ್ಯಪಟ್ಟನು. “ನಾನೇನು ಮಾಡಬೇಕೆಂಬುದು ನನಗೆ ತಿಳಿದಿದೆ” ಎಂದು ಗಟ್ಟಿಯಾಗಿ ಮಾತಾಡಿಕೊಂಡನು.

ತನ್ನ ಸಲಕರಣೆಗಳನ್ನು ಹೊಲದಲ್ಲಿ ಬಿಟ್ಟು ಮನೆಗೆ ಓಡಿಹೋದನು. ಮಾರಾಟ ಮಾಡಬಹುದಾದ ಪ್ರತಿಯೊಂದನ್ನೂ ಸಂಗ್ರಹಿಸಿದನು. ಈ ದಂಪತಿಗಳಿಗಿದ್ದ ಬಹು ಬೆಲೆಯುಳ್ಳ ತನ್ನ ತಾಯಿಕೊಟ್ಟಿದ್ದ ಕೊರಳ ಸರವನ್ನು ಧರಿಸಿದ ಅವನ ಹೆಂಡತಿ ಕೋಣೆಯೊಳಗೆ ಬಂದಳು. ಅವಳ ಕೊರಳಿನಿಂದ ಆ ಹಾರವನ್ನು ಅವನು ತೆಗೆದುಕೊಂಡನು. “ನೀನೇನು ಮಾಡುತ್ತಿರುವಿ? ನೀನು ಹುಚ್ಚನಾದಿಯೋ?” ಎಂದು ಆಕೆ ಕೂಗಿದಳು.

“ಅದನ್ನು ಮಾರುತ್ತೇನೆ” ಎಂದನು ಅವನು.

“ಮಾರುತ್ತೀಯೋ? ನನ್ನ ಸ್ವಂತದ್ದೆಂದರೆ ಅದೊಂದೇ ಆಭರಣ” ಎಂದಳಾಕೆ.

“ಸ್ತ್ರೀಯೇ, ಬೇಗನೇ ನೀನು ವಡವೆಗಳಿಂದ ತುಂಬಿಸಲ್ಪಡುವಿ” ಎಂದು ಬಾಗಿಲ ಕಡೆಗೆ ನಡೆದನು.

“ಹಾಗೋ, ನನ್ನ ಸುಂದರವಾದ ಬಟ್ಟೆಗೆ ಅವು ಚಂದವಾಗಿ ಕಾಣುವವು” ಎಂದು ತನ್ನ ಹರಕು ಬಟ್ಟೆ ತೋರಿಸಿ ನುಡಿದಳು.

ಆಕೆಯ ವ್ಯಂಗ್ಯ ಮಾತುಗಳ ಕಡೆಗೆ ಅವನು ಗಮನ ಕೊಡಲಿಲ್ಲ. ತನ್ನ ಆಡು, ಕತ್ತೆಯೊಡನೆ ತನ್ನ ಎಲ್ಲಾ ವಸ್ತುಗಳನ್ನು ಹೇರಿಕೊಂಡು ಹಾಡುತ್ತಾ ಮುನ್ನಡೆದನು. ತನಗಿದ್ದ ಎಲ್ಲವುಗಳನ್ನು ಮಾರಿದನು. ಆ ಮೇಲೆ ಆ ಹೊಲವನ್ನು ಕೊಂಡು ಕೊಂಡು ಆನಂದಿಸಿದನು. “ಈಗ ಇದು ನನ್ನದು; ಇದು ನಿಜವಾಗಿಯೂ ನನ್ನದು” ಎಂದು ಹೇಳಿದನು.

ದಯವಿಟ್ಟು ಈ ಕಥೆಯ ನೈತಿಕ, ಕಾನೂನಿನ ಹಾಗೂ ನೀತಿ ಪಾಠದ ವಿಷಯಗಳ ಬಗ್ಗೆ ತಲೆಕೆಡಿಸಿ ಕೊಳ್ಳಬೇಡಿರಿ. ಈ ಮನುಷ್ಯನು ಮಾಡಿದ್ದು ಸರಿಯೋ ತಪ್ಪೋ ಎಂಬುದು ನಮಗೆ ತಿಳಿದಿಲ್ಲ. ರಬ್ಬಿಗಳ ನಿಯಮವು ಈ ನಿಧಿಯನ್ನು ಅವನು ತನ್ನದೆಂದು ಹೇಳಿಕೊಳ್ಳಲು ಕಾನೂನು ಬದ್ಧ ಹಕ್ಕನ್ನು ಕೊಟ್ಟಿತ್ತು. ಆದರೆ ಅವನ ಈ ಹಕ್ಕನ್ನು ಬೇರೆ ಯಾರೂ ಸಾಧಿಸದಂತೆ ಅವನು ಅದನ್ನು ಕೊಂಡು ಕೊಂಡನೆಂದು ಕೆಲವರು ಯೋಚಿಸುತ್ತಾರೆ. ಇದು ಹಾಗಿತ್ತೋ ಇಲ್ಲವೋ ಎಂಬುದು ಸಾಮ್ಯದ ಸಂದೇಶಕ್ಕೆ ಪ್ರಾಮುಖ್ಯವಾದದ್ದಲ್ಲ. ಯೇಸುವಿನ ಪ್ರತಿಯೊಂದು ಸಾಮ್ಯವು ಒಂದೊಂದು ಪ್ರಮುಖ ಸತ್ಯವನ್ನು ಬೋಧಿಸುತ್ತದೆ.[5] ಪ್ರತಿಯೊಂದು ವಿವರವನ್ನೂ ನಾವು ಅನ್ವಯಿಸ ಬೇಕಾಗಿಲ್ಲ.[6] ಆದರೆ ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಲು ಯೇಸುವು ಅಪೇಕ್ಷಿಸಿದ ಮುಖ್ಯ ವಿಚಾರಕ್ಕಾಗಿ ನಾವು ನೋಡತಕ್ಕದ್ದು.

ಒಂದು ವಚನದ ಈ ಸಾಮ್ಯವನ್ನು ಪುನಃ ನೋಡಿರಿ. ಪ್ರಾಮುಖ್ಯತೆಯು ಮನುಷ್ಯನ ಮೇಲೆ ಇರಲಿಲ್ಲ. ಆದರೆ ನಿಧಿಯ ಮೇಲೆ ಇರುವುದು. “ಪರಲೋಕ ರಾಜ್ಯವು ದ್ರವ್ಯಕ್ಕೆ ಹೋಲಿಕೆ ಯಾಗಿದೆ ....” ಪರಲೋಕ ರಾಜ್ಯವು ನಿಧಿಯಂತೆ ಇದೆ - ಅದ್ಭುತವಾದದ್ದು, ಬಹು ಬೆಲೆಯುಳ್ಳದ್ದು, ನಾವು ಕಲ್ಪಿಸುವಷ್ಟು ಅತೀ ಶ್ರೇಷ್ಠವಾದದ್ದಾಗಿದೆ ಎಂದು ಯೇಸು ಹೇಳಿದರು.

**ಬಹು ಬೆಲೆಯುಳ್ಳ ಒಂದು ಮುತ್ತಿನ ಸಾಮ್ಯ**

"ಮತ್ತು" ಎಂಬುದರಿಂದ ವ. 45 ಪ್ರಾರಂಭವಾಗುತ್ತದೆ. ರಾಜ್ಯದ ತತ್ವವು ಒಂದು ಸಾಮ್ಯದಲ್ಲಿ ಇಡದಷ್ಟು ವಿಶಾಲವಾದದ್ದಾಗಿದೆ. ಆದುದರಿಂದ ಯೇಸು ಇನ್ನೊಂದು ಸಾಮ್ಯವನ್ನು ಕೊಟ್ಟನು "ಪರಲೋಕ ರಾಜ್ಯವು ... ವ್ಯಾಪಾರಸ್ಥನಿಗೆ ಹೋಲಿಕೆಯಾಗಿದೆ" (ವ. 45ಬಿ). ಹಿಂದಿನ ಸಾಮ್ಯದಲ್ಲಿ ಪ್ರಾಮುಖ್ಯತೆಯು ಹೂಳಿಟ್ಟ ದ್ರವ್ಯದ ಮೇಲೆ ಇತ್ತು. ಈ ಸಾಮ್ಯದಲ್ಲಿ ಪ್ರಾಮುಖ್ಯತೆಯು ಮನುಷ್ಯನ ಮೇಲಿದೆ.

ಆ ಮನುಷ್ಯನು "ಉತ್ತಮವಾದ ಮುತ್ತುಗಳನ್ನು ಹುಡುಕುತ್ತಿದ್ದನು" (ವ. 45ಸಿ). ಹಿಂದಿನ ಸಾಮ್ಯದಲ್ಲಿ ಆ ಮನುಷ್ಯನು ನಿಧಿಯನ್ನು ಕಂಡುಕೊಂಡನು. ಅವನು ಅದಕ್ಕಾಗಿ ಹುಡುಕುತ್ತಿದ್ದಿಲ್ಲ. ಅವನು ತನ್ನ ಕೆಲಸವನ್ನು ಮಾಡುತ್ತಿದ್ದಾಗ ಆಕಸ್ಮಿಕವಾಗಿ ಅದನ್ನು ಕಂಡುಕೊಂಡನು. ಈ ಸಾಮ್ಯದಲ್ಲಿ ಮನುಷ್ಯನು ಹುಡುಕುತ್ತಿದ್ದನು. ಸತ್ಯವನ್ನು ನೋಡಿ, ಅದನ್ನು ಗುರುತಿಸಿ, ಸಂತೋಷದಿಂದ ಅದನ್ನು ಅಪ್ಪಿಕೊಳ್ಳುವ ಜನರಿದ್ದಾರೆ - ಹಾಗೂ ಅದಕ್ಕಾಗಿ ಹುಡುಕುವವರೂ ಇದ್ದಾರೆ.

ಯೋಹಾನ 3 ಮತ್ತು 4 ಅಧ್ಯಾಯಗಳು ಇಂಥ ವಿರುದ್ಧವಾದ ಸಂಗತಿಗಳನ್ನು ಉದಾಹರಿಸುತ್ತವೆ. ಅಧ್ಯಾಯ 3ರಲ್ಲಿ ನಿಕೊದೇಮನು ಉತ್ತರಗಳನ್ನು ಹುಡುಕುತ್ತ ಯೇಸುವಿನ ಬಳಿಗೆ ಬಂದನು ಹಾಗೂ ಮೆಸ್ಸೀಯನನ್ನು ಕಂಡುಕೊಂಡನು. ಅಧ್ಯಾಯ 4ರಲ್ಲಿ ಸಮಾರ್ಯ ಸ್ತ್ರೀಯು ನೀರಿಗಾಗಿ ಬಂದಳು ಮತ್ತು ಕ್ರಿಸ್ತನ ಬಗ್ಗೆ ಸತ್ಯವನ್ನು ತಿಳಿದು ಕೊಂಡಳು. ಅಪೊಸ್ತಲರ ಕೃತ್ಯ 8 ಮತ್ತು 9 ನೆಯ ಅಧ್ಯಾಯಗಳು ಇನ್ನೊಂದು ದೃಷ್ಟಾಂತ ಕೊಡುತ್ತವೆ. ಅ. ಕೃ. 8ರಲ್ಲಿ ಐಥಿಯೋಪ್ಯದ ಒಬ್ಬ ಮಹಾವ್ಯಕ್ತಿಯು ತನ್ನ ಬೈಬಲನ್ನು ಓದುತ್ತಾ[7] ಉತ್ತರಗಳನ್ನು ಹುಡುಕುತ್ತಾ ಪ್ರಯಾಣಮಾಡುತ್ತಿದ್ದನು. ಅ. ಕೃ. 9ರಲ್ಲಿ ಸೌಲನು ಭೂಮಿಯ ಮೇಲಿರುವ ಪ್ರತಿಯೊಬ್ಬ ಕ್ರೈಸ್ತನನ್ನು ನಾಶಮಾಡಲು ಹುಡುಕುತ್ತಾ ಪ್ರಯಾಣ ಮಾಡುತ್ತಿದ್ದನು. ಅವರಿಬ್ಬರೂ ತಮ್ಮ ಪ್ರಯಾಣಗಳ ಅಂತ್ಯದಲ್ಲಿ ಯೇಸುವಿನ ಬಗ್ಗೆ ಸತ್ಯವನ್ನು ಕಲಿತುಕೊಂಡರು.

ನೀವು ಆರಾಧನೆಗಳಲ್ಲಿ ಯಾಕೆ ಭಾಗವಹಿಸುತ್ತೀರಿ? ನೀವು ಸತ್ಯದ ಅನ್ವೇಷಕರೋ? ಜೀವನದ ಉದ್ದೇಶಗಳನ್ನು ಕಂಡುಕೊಳ್ಳಲು ಬಯಸುವಿರೋ? ನಿಮ್ಮ ಜೀವಿತವನ್ನು ವೃದ್ಧಿಗೊಳಿಸುವುದು ಯಾವುದು ಎಂಬುದನ್ನು ಕಂಡು ಕೊಳ್ಳಲು ಬಯಸುವಿರೋ? ದೇವರೊಂದಿಗೆ ನಿತ್ಯತ್ವವನ್ನು ಕಳೆಯುವುದನ್ನು ಅಪೇಕ್ಷಿಸುವಿರೋ? ಇಲ್ಲವೇ ಕೆಲವೊಂದು ಕಾರಣಕ್ಕಾಗಿ ಅಂಥ ಉನ್ನತವಾದವುಗಳಲ್ಲದ ಕಡೆಗೆ ಹೋಗಲು ಬಯಸುವಿರೋ? ನಿಮ್ಮ ಪ್ರೇರಣೆಯು ಅತೀ ಮಹತ್ವದ್ದಾಗಿರುವಂಥದ್ದಲ್ಲ. ಅತೀ ಪ್ರಾಮುಖ್ಯವಾದದ್ದು ನೀವು ನೋಡುವಾಗ ನಿಧಿಯ ಮೌಲ್ಯ ಗುರುತಿಸಲು ನಿಮಗೆ ಸಾಮರ್ಥ್ಯ ವಿದೆಯೋ ಇಲ್ಲವೋ ಎಂಬುದಲ್ಲ - ಹಾಗೂ ನೀವು ಅದನ್ನು ಗುರುತಿಸಿದಾಗ ಅದನ್ನು ಪಡೆದು ಕೊಳ್ಳಲು ನಿಮಗೆ ಆಸಕ್ತಿಯುಳ್ಳ ಅಪೇಕ್ಷೆ ಇರುವುದೋ ಇಲ್ಲವೋ.

ನಮ್ಮ ಕಥೆಯೊಂದಿಗೆ ಮುಂದುವರಿಯೋಣ: ಈ ಮನುಷ್ಯನು "ಉತ್ತಮವಾದ ಮುತ್ತುಗಳನ್ನು" ಹುಡುಕುತ್ತಿದ್ದನು. ಮುತ್ತುಗಳು ಬೆಲೆಯುಳ್ಳ ವಜ್ರಾಭರಣಗಳೆಂದು ಇಂದು ತಿಳಿಯಲ್ಪಟ್ಟಿವೆ. ಸತ್ಯವೇದದ ಸಮಯಗಳಲ್ಲಿ ಇನ್ನೂ ಹೆಚ್ಚು ಅಮೂಲ್ಯವಾದವುಗಳೆಂದು ತಿಳಯಲ್ಪಟ್ಟಿದ್ದವು. ಜನರು ಅವುಗಳನ್ನು ಹೊಂದಿಕೊಳ್ಳಲು, ಅವುಗಳನ್ನು ನೋಡಲು ಬಯಸಿದ್ದು ಮಾತ್ರವೇ ಅಲ್ಲ, ಅವುಗಳನ್ನು ಹಿಡಿದುಕೊಂಡು ಸ್ಪರ್ಶಿಸಲು ಬಯಸಿದರು. ಅವುಗಳ ಮೃದುವಾದ ತಂಪನ್ನು ಸ್ಪರ್ಶದಿಂದ ಅನುಭವಿಸಲು ಅವುಗಳ ಆಳವನ್ನು ತಿಳಿಯಲು ಬಯಸಿದರು. ರಹಸ್ಯ ವಿದ್ಯೆ ಪಡೆದವರಿಗೆ ಮುತ್ತುಗಳು ವಶೀಕರಣಕ್ಕಾಗಿದ್ದವು. ಉತ್ತಮವಾದ ಮುತ್ತುಗಳ ವ್ಯಾಪಾರಿಯು ಸರಿಗಟ್ಟಲಾಗದ

ವಸ್ತುಗಳೊಂದಿಗಿರುವ ಮಹತ್ವದ ವ್ಯಕ್ತಿಯಾಗಿದ್ದನು.

ಮುತ್ತುಗಳು ಆಭರಣಗಳಲ್ಲಿ ಶ್ರೇಷ್ಠವಾದವುಗಳು. ಹೆಚ್ಚಾದ ರತ್ನಗಳು ಭೂಮಿಯಲ್ಲಿ ಉಷ್ಣತೆಯಿಂದಲೂ ಸಾವಿರಾರು ವರ್ಷಗಳ ಒತ್ತಡದಿಂದಲೂ ರೂಪಿಸಲ್ಪಡುತ್ತವೆ. ಆದರೆ ಮುತ್ತುಗಳು ಈ ಸಾಲುಗಳನ್ನು ಓದುತ್ತಿರುವಾಗಲೂ ಸಹ ರೂಪಿಸಲ್ಪಡುತ್ತಿರುವವು. ಸಿಂಪಿನ ಚಿಪ್ಪಿನೊಳಗೆ (oyster's shell) ಉಸುರಿನ ಕಣ ಸೇರಿ ಕೊಳ್ಳುವುದು. ಸಿಂಪು ದಪ್ಪವಾದ ಹಾಲಿನಂಥ ದ್ರವವನ್ನು ಸುರಿಸಿ ಕಣದ ಸುತ್ತು ಹತ್ತಿಕೊಂಡು ಗಾಜಿನಂತಾಗುವುದು. ಈ ಗಾಜಿನದು ಗಟ್ಟಿಯಾಗುವವರೆಗೆ ಸುಮ್ಮನಿದ್ದು ಆಮೇಲೆ ಪುನಃ ದ್ರವದಿಂದ ಸುತ್ತಲೂ ಅಂಟಿಕೊಳ್ಳುವುದು. ಹೀಗೆ ಮುತ್ತು ರೂಪುಗೊಳ್ಳುವುದು. ಆಭರಣಗಳಲ್ಲಿ ಮುತ್ತು ಮಾತ್ರವೇ ಶ್ರಮದ ಮೂಲಕ ರೂಪಿಸಲ್ಪಡುತ್ತದೆ ಎಂದು ಹೇಳುತ್ತಾರೆ. ಆ ದಿನಗಳಲ್ಲಿ ಮುತ್ತುಗಳು ಲೋಕದ ಕೆಲವೇ ಸ್ಥಳಗಳಲ್ಲಿ ದೊರೆಯುತ್ತಿದ್ದವು: ಭೂಮಧ್ಯ ಸಮುದ್ರದ ಆಯ್ದ ಸ್ಥಳಗಳಿಂದ, ಕೆಂಪು ಸಮುದ್ರದಿಂದ, ಫರ್ಶಿಯನ್ ಗಲ್ಫದಿಂದ ಹಾಗೂ ಬ್ರಿಟನ್‌ದಿಂದ.

ಈ ಮನುಷ್ಯನು ಮುತ್ತುಗಳಿಗಾಗಿ ಹುಡುಕುತ್ತಿದ್ದನು. ಆದರೆ ಯಾವುದೇ ಮುತ್ತುಗಳಿಗಾಗಿ ಅಲ್ಲ. "ಉತ್ತಮವಾದ" ಮುತ್ತುಗಳಿಗಾಗಿ, ಅತ್ಯುತ್ತಮವಾದದ್ದಾಕ್ಕಾಗಿ ಹುಡುಕುತ್ತಿದ್ದನು. ಆಕಸ್ಮಿಕ ರೀತಿಯಲ್ಲಿ ಮುತ್ತುಗಳು ರೂಪುಗೊಳ್ಳುತ್ತಿದ್ದುದರಿಂದ ಅವು ಭಿನ್ನವಾಗಿರುತ್ತವೆ. ಕೆಲವು ಸಲ ಮುತ್ತು ಪರಿಪೂರ್ಣವಾಗಿ ದುಂಡಗಿರುವದಿಲ್ಲ, ಕೆಲವು ಸಲ ಚಿಕ್ಕವಾಗಿರುವವು, ಬಣ್ಣ ಒಂದೇ ಯಾಗಿರುವದಿಲ್ಲ. ವ್ಯಾಪಾರಿಯ ಮನಸ್ಸಿನಲ್ಲಿ ಒಂದು ಆದರ್ಶ ರೂಪವಿತ್ತು. ಅಂಥದ್ದು ದೊರೆಯುವ ನೀರೀಕ್ಷೆ ಅವನಿಗಿರಲಿಲ್ಲ. ಎಲ್ಲಾ ಮುತ್ತುಗಳನ್ನು ಹೋಲಿಸಿ ಪರಿಪೂರ್ಣ ಮುತ್ತನ್ನು ಪಡೆಯಲು ಯೋಚಿಸುತ್ತಿದ್ದನು. ಸಾವಿರಾರು ಮುತ್ತುಗಳ ವ್ಯವಹಾರ ಮಾಡಿದ ಅವನಿಗೆ ಮುತ್ತುಗಳ ಮೌಲ್ಯವನ್ನು ಗುರುತಿಸುವ ಕಲೆ ಸರಳವಾಗಿತ್ತು.

ಒಂದು ದಿನ ಆಶ್ಚರ್ಯಕರವಾದ ಸಂಗತಿ ಸಂಭವಿಸಿತು. ಜೀವನದಲ್ಲಿ ಯಾವಾಗಲೋ ಆಕಸ್ಮಿಕವಾಗಿ ಸಂಭವಿಸುವಂಥದ್ದು; ಅವನು ಹುಡುಕುತ್ತಿದ್ದ, ಪರಿಪೂರ್ಣ ಮುತ್ತು ದೊರೆಯಿತು, ಆ ಮುತ್ತನ್ನು ಕೊಂಡುಕೊಳ್ಳಲು ಬೆಲೆಯ ಬಗ್ಗೆ ಹಿಂಜರಿಯಲಿಲ್ಲ, ವಾದ ಮಾಡಲಿಲ್ಲ "ಅವನು ಬಹು ಬೆಲೆಯುಳ್ಳ ಮುತ್ತನ್ನು ಕಂಡು ತನ್ನ ಬದುಕನ್ನೆಲ್ಲಾ[8] ಮಾರಿ ಬಂದು ಅದನ್ನು ಕೊಂಡುಕೊಂಡನು" (ವ. 46).

ಹಿಂದಿನ ಸಾಮ್ಯದಲ್ಲಿಯಂತೆ ಈ ಸಾಮ್ಯದಲ್ಲಿಯೂ ವಿವರಗಳನ್ನು ಒತ್ತಿ ಹೇಳಬಾರದು. ಮೊದಲನೆಯ ಸಾಮ್ಯದಲ್ಲಿ ಮನುಷ್ಯನು ಸ್ವಲ್ಪವನ್ನು ಕೊಟ್ಟು ಬಹಳವಾದದ್ದನ್ನು ಪಡೆದುಕೊಂಡನು. ಈ ಸಾಮ್ಯದಲ್ಲಿ ಮನುಷ್ಯನು ಪೂರ್ಣ ಕ್ರಯೆಕೊಟ್ಟನು. ಕೊಟ್ಟ ಹಣವು ಸ್ವಲ್ಪವಾಗಿತ್ತೋ ಬಹಳವಾಗಿತ್ತೋ ಎಂಬುದು ಎರಡೂ ಸಾಮ್ಯಗಳಲ್ಲಿ ಮುಖ್ಯವಾದ ವಿಷಯವಾಗಿರಲಿಲ್ಲ. ರಕ್ಷಣೆಯನ್ನು ಮನುಷ್ಯನು ಕೊಂಡುಕೊಳ್ಳುವುದಕ್ಕಾಗುವದಿಲ್ಲ. ಅದು ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಡಬೇಕು. ನೀನು ಮತ್ತು ನಾನು ಆತ್ಮಿಕ ಆಶೀರ್ವಾದಗಳನ್ನು ಕೊಳ್ಳಲಾರೆವು, ಸಂಪಾದಿಸಲಾರೆವು ಇಲ್ಲವೇ ಅವುಗಳಿಗೆ ಅರ್ಹರಾಗಲಾರೆವು. ಬಹು ಬೆಲೆಯುಳ್ಳ ಮುತ್ತಿನ ಸಾಮ್ಯದಲ್ಲಿ ನಾವು ಕಲಿಯ ಬೇಕೆಂದು ಯೇಸು ಬಯಸುವ ಪಾಠ ಯಾವುದು? ಆ ಮನುಷ್ಯನು ಅದ್ಭುತವಾದ ನಿಧಿಯನ್ನು ಪಡೆಯಲು ತನಗಿದ್ದದ್ದೆಲ್ಲವನ್ನೂ ಕೊಡಲು ಸಿದ್ಧನಾಗಿದ್ದನು.

ಎರಡು ಸಾಮ್ಯಗಳ ಸಾರಂಶ ಹೀಗಿರಬಹುದು: ಪರಲೋಕ ರಾಜ್ಯವು ಅತೀ ಅಮೂಲ್ಯವಾದದ್ದು, ಬಹು ಶ್ರೇಷ್ಠವಾದದ್ದು, ಲೋಕದಲೆಲ್ಲಾ ಅತೀ ಅಪೇಕ್ಷಣಿಯವಾದದ್ದು.

## ರಾಜ್ಯದ ನಿಜಸ್ವರೂಪ

ಅಷ್ಟು ಬೆಲೆಯುಳ್ಳ ಈ "ಪರಲೋಕ ರಾಜ್ಯವು" ಯಾವುದು?

ಪದಗಳು "ಪರಲೋಕ ರಾಜ್ಯ" ಎಂದಿರುವದರಿಂದ, ನಮ್ಮ ಮೊದಲನೆಯ ವಿಚಾರವು ಪರಲೋಕದ ಬಗೆಗೆ ಇರುವುದು. ಕೆಲವು ಸಲ "ರಾಜ್ಯ" ಎಂಬುದು ಪರಲೋಕವನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ. ಆದರೆ ಈ ನಿರ್ಧಿಷ್ಠ ವಚನದಲ್ಲಿ ಅಲ್ಲ. ಮಾರ್ಕ ಮತ್ತು ಲೂಕರು ಇದೇ ಸಾಮ್ಯಗಳ ಮೂಲ ಸಂಗ್ರಹವನ್ನು ದಾಖಲೆ ಮಾಡಿದಾಗ, ಅವರು "ದೇವರ ರಾಜ್ಯ" ಎಂಬ ಮಾತುಗಳನ್ನು ಉಪಯೋಗಿಸಿದರು (ಮಾರ್ಕ 4:11, 26, 30; ಲೂಕ 8:10). ಅಷ್ಟು ಬೆಲೆಯುಳ್ಳ "ದೇವರ ರಾಜ್ಯವು" ಯಾವುದು? ಎಂದು ಪ್ರಶ್ನೆಯನ್ನು ಕೇಳುವೆನು.

"ದೇವರ ರಾಜ್ಯ" ಎಂಬ ಮಾತು ಪರಿಶುದ್ಧ ಬರಹಗಳಲ್ಲಿ ಕಂಡುಬರುತ್ತದೆ. ಮೂಲದಲ್ಲಿ ಪದಗಳು ತನ್ನ ರಾಜ್ಯದ ಮೇಲೆ ದೇವರ ಆಳಿಕೆಗೆ ಸಂಬಂಧಿಸಿವೆ. ಸತ್ಯವೇದದಲ್ಲಿ ಇದು ಕೆಲವು ಸಲ ಇಡೀ ಜಗತ್ತಿಗೆ ಇಡೀ ವಿಶ್ವಕ್ಕೆ ಸಂಬಂಧಿಸಿದೆ. ಯಾಕೆಂದರೆ ದೇವರು ಪ್ರತಿಯೊಂದನ್ನು ನಿಯಂತ್ರಿಸುತ್ತಾನೆ. ಹೀಗಿದ್ದರೂ ಸಾಮಾನ್ಯವಾಗಿ ದೇವರ ಜನರ ಹೃದಯಗಳಲ್ಲಿಯೂ ಜೀವನಗಳಲ್ಲಿಯೂ ತನ್ನ ವಿಶೇಷವಾದ ಆಳಿಕೆಯ ಬಗ್ಗೆ ಮತ್ತು ಆತನ ಅಧಿಕಾರಕ್ಕೆ ತಮ್ಮನ್ನು ಒಪ್ಪಿಸಿಕೊಳ್ಳುವದರ ಬಗ್ಗೆ ಮಾತನಾಡಲು ಈ ಮಾತುಗಳು ಉಪಯೋಗಿಸಲ್ಪಟ್ಟಿವೆ. ಹಳೆ ಒಡಂಬಡಿಕೆಯಲ್ಲಿ ಇದು ಇಸ್ರಯೇಲು ರಾಜ್ಯವಾಗಿದೆ ಯಾಕೆಂದರೆ ಸಿನಾಯಿ ಪರ್ವತದ ಬಳಿಯಲ್ಲಿ ಇಸ್ರಾಯೇಲ್ಯರು ದೇವರೊಂದಿಗೆ ಒಂದು ಒಡಂಬಡಿಕೆ ಮಾಡಿಕೊಂಡರು.

ಹಳೆ ಒಡಂಬಡಿಕೆಯ ಅಧ್ಯಯನ ಮಾಡುವಂತೆ ಇಸ್ರಾಯೇಲ್ಯರು ಮುಂದೆ ಸ್ಥಾಪಿಸಲ್ಪಡಲಿಕ್ಕಿದ್ದ ವಿಶೇಷ ರಾಜ್ಯವನ್ನು ಮುನ್ನೋಡುತ್ತಿತ್ತು ಎಂಬುದನ್ನು ಕಂಡುಕೊಳ್ಳುವೆವು (ಹೋಲಿಸು. ದಾನಿಯೇಲ 2:44). ಅದು "ಮೆಸ್ಸೀಯನೆಂದು" ತಿಳಿಯಲ್ಪಡುವ ಅರಸನಿಂದ ಆಳಲ್ಪಡುವುದು ಎಂದು ಅವರು ತಿಳಿದಿದ್ದರು (ಹೋಲಿಸು ದಾನಿಯೇಲ 9:25, 26). "ಮೆಸ್ಸೀಯ" ಅಂದರೆ "ಅಭಿಷಿಕ್ತನು" ಎಂದರ್ಥ. ಇಸ್ರಯೇಲಿನ ಅರಸುಗಳು "ಕರ್ತನಿಂದ ಅಭಿಷಿಕ್ತರು" ಎಂದು ತಿಳಿಯಲ್ಪಡುತ್ತಿದ್ದರು (ಹೋಲಿಸು. 1 ಸಮೂ. 24:10; 26:9). ಮೆಸ್ಸೀಯನು ತನ್ನ ರಾಜ್ಯವನ್ನು ಸ್ಥಾಪಿಸಲು ಬರಲಿಕ್ಕಿದ್ದನು ಎಂಬ ಮುಖ್ಯ ಪ್ರಸ್ತಾಪವನ್ನು ಹಳೆ ಒಡಂಬಡಿಕೆಯೆಲೆಲ್ಲಾ ನೋಡುತ್ತೇವೆ.

ಯೇಸು ಮುನ್ನೋಡಲ್ಪಟ್ಟ ಮೆಸ್ಸೀಯನು, "ಮೆಸ್ಸೀಯ" ಎಂಬ ಪದದ ಗ್ರೀಕ ರೂಪವು "ಕ್ರಿಸ್ತನು." ಯೇಸುಕ್ರಿಸ್ತನು ಬಂದಾಗ ಆತನ ಸಂದೇಶವು, "ಪರಲೋಕ ರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ" (ಮತ್ತಾಯ 4:17). "ರಾಜ್ಯದ ಕುರಿತಾಗಿರುವ ಹಳೆ ಒಡಂಬಡಿಕೆಯ ಎಲ್ಲಾ ವಾಗ್ದಾನಗಳೂ ಪ್ರವಾದನೆಗಳೂ ನೆರವೇರುವ ಸಮಯಬಂದಿದೆ" ಎಂದು ಬೇರೆ ರೀತಿಯಲ್ಲಿ ಹೇಳಬಹುದು. ಯೇಸು ರಾಜ್ಯದ ಬಗ್ಗೆ ಮಾತಾಡಿದಾಗ "ನನ್ನ ರಾಜ್ಯವು ಈ ಲೋಕದ್ದಲ್ಲ" ಎಂದು ಒತ್ತಿ ಹೇಳಿದನು (ಯೋಹಾನ 18:36). ಆತನ ಆಡಳಿತೆಯು ಆತ್ಮಿಕ ಆಡಳಿತೆಯಾಗಿರಬೇಕಿತ್ತು.

ತನ್ನ ಮರಣದ ಮೊದಲು ಯೇಸು ತನ್ನ ಶಿಷ್ಯರಿಗೆ ಅವರು ದೇವರ ರಾಜ್ಯವು ಬಲದೊಂದಿಗೆ ಬಂದನಂತರ ಅದನ್ನು ನೋಡುವರು ಎಂದು ಹೇಳಿದ್ದನು (ಮಾರ್ಕ 9:1). ತನ್ನ ಮರಣ, ಹೂಣಿಡುವಿಕೆ ಹಾಗೂ ಪುನರುತ್ಥಾನದ ನಂತರ ಅಪೊಸ್ತಲರಿಗೆ, "ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ" ಯೆರೂಸಲೇಮಿನಲ್ಲಿ ಕಾದುಕೊಂಡಿರ ಬೇಕೆಂದು ಹೇಳಿದನು (ಲೂಕ 24:49). ತಾನು ದಿವಾರೋಹಣನಾಗುವದಕ್ಕಿಂತ ಮೊದಲು, "ಪರಿಶುದ್ಧಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು

ಹೊಂದುವಿರಿ" ಎಂದು ಅವರಿಗೆ ಹೇಳಿದನು (ಅ. ಕೃ. 1:8). ಕೆಲವು ದಿನಗಳನಂತರ ಯೆಹೂದ್ಯರ ಪಂಚಾಶತ್ತಮ ಹಬ್ಬದ ದಿನದಂದು ಪವಿತ್ರಾತ್ಮನು ಅವರ ಮೇಲೆ ಬಂದನು (ಅ. ಕೃ. 2:1-4). ಪರಿಶುದ್ಧಾತ್ಮನು ಬಂದಾಗ ಬಲವು ಬಂದಿತು. ಬಲವು ಬಂದಾಗ ರಾಜ್ಯವು ಬಂದಿತು. ಶತಮಾನಗಳಿಂದ  ಮುನ್ನೋಡಿದ ರಾಜ್ಯವು ಅಂತಿಮವಾಗಿ ಕ್ರಿಸ್ತನ ಮರಣ, ಹೂಣಿಡುವಿಕೆ, ಪುನರುತ್ಥಾನದ ನಂತರ ಪ್ರಥಮ ಪಂಚಾಶತ್ತಮ ಹಬ್ಬದ ದಿನದಂದು ಸ್ಥಾಪಿಸಲ್ಪಟ್ಟಿತು. ಆ ಸಮಯದಿಂದ ರಾಜ್ಯವು ಅಸ್ತಿತ್ವದಲ್ಲಿ ಮುಂದುವರಿಯುತ್ತಲಿದೆ (ಕೊಲೊಸ್ಸೆ. 1:13).

ಅ. ಕೃ. 2ರಲ್ಲಿ ಈ ಸಂಘಟನೆಗೆ ಹೆಚ್ಚು ಸಾಮಾನ್ಯವಾದ ಪದಬಂದಿತು: "ಸಭೆ" ಎಂಬುದು ಆ ಪದ. "ಕರ್ತನೇ, ನಿನ್ನ ರಾಜ್ಯವನ್ನು ನಾನು ಪ್ರೀತಿಸುವೆ" ಎಂಬ ಸಂಗೀತ ವನ್ನು ಹಾಡುತ್ತೇವೆ. ಮೊದಲನೆಯ ಚರಣ ಹೀಗೆ ಪ್ರಾರಂಭವಾಗುತ್ತದೆ:

> ಕರ್ತನೇ, ನಿನ್ನ ರಾಜ್ಯವನ್ನು ನಾನು ಪ್ರೀತಿಸುವೆ,
> ನೀನು ವಾಸಿಸುವ ಮನೆಯಿದು;
> ತನ್ನ ಅಮೂಲ್ಯ ರಕ್ತದಿಂದ
> ನಮ್ಮ ವಿಮೋಚಕನು ರಕ್ಷಿಸಿದ ಸಭೆಯಿದು.
> ದೇವರೇ, ನಿನ್ನ ಸಭೆಯನ್ನು ನಾನು ಪ್ರೀತಿಸುವೆನು.[9]

ಹೊಸ ಒಡಂಬಡಿಕೆಯಲ್ಲೆಲ್ಲಾ ಸಭೆಯು ದೇವರ ವಿಶೇಷ ರಾಜ್ಯ ಎಂಬಂತೆ ಉಪಯೋಗಿಸಲ್ಪಟ್ಟಿದೆ. ಸಭೆಯು ಇಂದು ದೇವರು ಆಳುವ ವಿಶೇಷ ಕ್ಷೇತ್ರವು ಆತನ ಅಧಿಕಾರಕ್ಕೆ ಒಪ್ಪಿಸಿ ಕೊಟ್ಟ ಜನರೂ ಆಗಿದೆ.

"ಸಭೆ" ಹಾಗೂ "ರಾಜ್ಯ" ಎಂಬ ಪದಗಳು ಒಂದಕ್ಕೊಂದು ಅದಲು ಬದಲಾಗಿ ಹೊಸ ಒಡಂಬಡಿಕೆಯಲ್ಲಿ ಆಗಾಗ ಉಪಯೋಗಿಸಲ್ಪಟ್ಟಿವೆ. ಉದಾಹರಣೆಯಾಗಿ, ಯೋಹಾನ 3:3, 5ರಲ್ಲಿ ನೀರಿನಿಂದಲೂ ಆತ್ಮನಿಂದಲೂ ಹುಟ್ಟುವದರಿಂದ ರಾಜ್ಯದಲ್ಲಿ ಒಬ್ಬನು ಪ್ರವೇಶಿಸುವನೆಂದು ಯೇಸು ಹೇಳಿದ್ದಾನೆ. ಅಪೊಸ್ತಲರ ಕೃತ್ಯಗಳಲ್ಲಿ ಹಾಗೂ ಪ್ರತಿಕೆಗಳಲ್ಲಿ ಪರಿಶುದ್ಧಾತ್ಮನಿಂದ ಪ್ರೇರಿಸಲ್ಪಟ್ಟ ಜನರಿಂದ ನಿರ್ದೇಶಿಸಲ್ಪಟ್ಟಂಥೆ ನೀರಿನಲ್ಲಿ ಬಾಪ್ತಿಸ್ಮ ಹೊಂದಿದವರನ್ನು ಸಭೆಯೊಂದಿಗೆ ಸೇರಿಸಲ್ಪಟ್ಟರೆಂದಿದೆ (ಅ. ಕೃ. 2:38, 41, 47; 1 ಕೊರಿಂಥ. 12:13). ಮತ್ತಾಯ 16ರಲ್ಲಿ ಯೇಸು ತನ್ನ "ಸಭೆಯನ್ನು" ಕಟ್ಟಿದ್ದರ ಬಗ್ಗೆ ಪುನಃ ಮಾತಾಡಿದನು (ವ. 18). ಆದರೆ ಆಗ ಆತನು ಅದನ್ನು "ರಾಜ್ಯದಂತೆ" ಕಟ್ಟುವದಕ್ಕೆ ಸಂಬಂಧಿಸಿದನು (ವ. 19), ಮುಂದೆ ಯೇಸು ಕರ್ತನ ಭೋಜನ ಸ್ಥಾಪಿಸಿದಾಗ, "ದೇವರ ರಾಜ್ಯವು" ಬರುವವರೆಗೆ ಪುನಃ ಪಸ್ಕದ ಊಟ ಮಾಡುವದಿಲ್ಲ ಎಂದು ಹೇಳಿದರು (ಲೂಕ 22:16, 18). ಅಪೊಸ್ತಲರ ಕೃತ್ಯಗಳಲ್ಲಿಯು ಪತ್ರಿಕೆಗಳಲ್ಲಿಯೂ ಸಭೆಯು ಕರ್ತನ ಭೋಜನದಲ್ಲಿ ಪಾಲುಗೊಂಡಿತು (ಅ. ಕೃ. 20:7; 1 ಕೊರಿಂಥ 11:17-34).

ಆದುದರಿಂದ ಮತ್ತಾಯ 13ರಲ್ಲಿಯ ಎರಡು ಸಾಮ್ಯಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. "ಇಡೀ ಲೋಕದಲ್ಲಿಯ ಸಭೆಯು ಅತಿ ಬೆಲೆಯುಳ್ಳ, ಅತೀ ಶ್ರೇಷ್ಠವಾದ, ಬಹಳವಾಗಿ ಅಪೇಕ್ಷಿಸುವ ಸರಕು ಆಗಿದೆ."

ಇದಕ್ಕೆ ಕೂಡಲೇ ವಿರೋಧವನ್ನು ಕೇಳುತ್ತೇನೆ: "ಒಂದು ನಿಮಿಷ ತಾಳಿರಿ! ನೀವು ಎಲ್ಲಿ ಪ್ರಸಂಗಿಸುತ್ತೀರಿ, ಆ ಗುಂಪನ್ನೂ ಅದು ಆರಾಧಿಸುವದನ್ನೂ ನೋಡಿದ್ದೇನೆ. ಅವರು ಅಷ್ಟು ಬೆಲೆಯುಳ್ಳವರೆಂದು ನನಗೆ ಕಂಡು ಬರುವದಿಲ್ಲ" ಅವರು ಹಾಗೆ ಕಾಣಲಿ

ಬಿಡಲಿ ಅವರು ಹಾಗೆ ಆಗಿದ್ದಾರೆ. ಅದು ನಾನು ಬೆಲೆ ಕಟ್ಟಿದ್ದಲ್ಲ ಆದರೆ ದೇವರು ಬೆಲೆ ಕಟ್ಟಬೇಕಾಗಿದೆ. ಅದನ್ನು ಕೊಂಡು ಕೊಳ್ಳಲು ಕ್ರಿಸ್ತನ ರಕ್ತವು ಬೇಕಾಗಿತ್ತು (ಅ. ಕೃ. 20:28).

ನನ್ನ ಹೇಳಿಕೆಯನ್ನು ವಿಸ್ತರಿಸಿದರೆ ನಿಮಗೆ ಒಂದು ವೇಳೆ ಸಹಾಯವಾಗಬಹುದು. "ಸಭೆ" ಎಂಬ ಪದವನ್ನು ನಾನು ಉಪಯೋಗಿಸುವಾಗ ಯಾವುದೇ ಮಾನವ ನಿರ್ಮಿತ ಸಂಸ್ಥೆಯ ಬಗ್ಗೆ ಹೇಳುತ್ತಿರುವದಿಲ್ಲ. ಆದರೆ ಹೊಸ ಒಡಂಬಡಿಕೆಯಲ್ಲಿ ನಾವು ಓದುವ ಸಭೆಗೆ ಸಂಬಂಧಿಸಿರುತ್ತದೆ. ಸಭೆಯನ್ನು ಇತರ ಬೈಬಲ್ ತತ್ವಗಳಿಂದ ಬೇರೆ ಮಾಡಲಿಕ್ಕಾಗುವದಿಲ್ಲ.

ಉದಾಹರಣೆಯಾಗಿ, ಸಭೆಯನ್ನು ಯೇಸು ಕ್ರಿಸ್ತನಿಂದ ಪ್ರತ್ಯೇಕಿಸಲಿಕ್ಕಾಗುವದಿಲ್ಲ. ಯೇಸು ಸಭೆಯ ಶಿರಸ್ಸು. ಸಭೆಯು ಆತನ ದೇಹ (ಎಫೆಸ. 1:22, 23). ಸಭೆಯು ಕ್ರಿಸ್ತನ "ಪರಿಪೂರ್ಣತೆ" ಯಾಗಿರುವುದು (ಎಫೆಸ. 1:23). ಯೇಸುವಿಗೂ ಆತನ ಸಭೆಗೂ ಸಂಬಂಧವಿದೆ. ಸೌಲನು ಸಭೆಯನ್ನು ಹಿಂಸಿಸಿದಾಗ (ಅ. ಕೃ. 8:3) "ನನ್ನನ್ನು ಯಾಕೆ ಹಿಂಸೆ ಪಡಿಸುತ್ತೀ?" (ಅ. ಕೃ. 9:4) ಎಂದು ಯೇಸು ಪ್ರಶ್ನಿಸಿದರು. ಆದುದರಿಂದ ನಾವು ಸಭೆಯ ಬಗ್ಗೆ ಮಾತಾಡುವಾಗ - ನಾವು ಯೇಸು ಕ್ರಿಸ್ತನನ್ನು ಕೂಡಿಸಿಕೊಳ್ಳಲು - ಹಾಗೂ ಆತನು ಅತೀ ಹೆಚ್ಚು ಮೌಲ್ಯವುಳ್ಳವನೂ ಅತೀ ಹೆಚ್ಚು ಶ್ರೇಷ್ಠನೂ ಎಲ್ಲಾ ಲೋಕದಲ್ಲಿ ಅತಿಯಾಗಿ ಅಪೇಕ್ಷಿಸ ತಕ್ಕವನೂ ಆಗಿರುವನೆಂದು ಒಪ್ಪಿಕೊಳ್ಳುತ್ತೇವೆ.[10]

ಸಭೆಯನ್ನು ರಕ್ಷಣೆಯಿಂದ ಬೇರೆ ಮಾಡಲಿಕ್ಕಾಗುವದಿಲ್ಲ. ಸಭೆಗಾಗಿ ಯೇಸುವು ಶಿಲುಬೆಯ ಮೇಲೆ "ತನ್ನನ್ನು ಕೊಟ್ಟನು" (ಎಫೆಸ. 5:25). ಆತನು "ತನ್ನ ಸ್ವಂತ ರಕ್ತದಿಂದ" ಸಭೆಯನ್ನು ಕೊಂಡು ಕೊಂಡನು (ಅ. ಕೃ. 20:28). ಆತನು ಸಭೆಯ "ರಕ್ಷಕನು" ಆಗಿರುವನು (ಎಫೆಸ. 1:22, 23; 5:23). ಜನರು ಆತನಿಗೆ ವಿಧೇಯರಾಗುವಾಗ ಮತ್ತು ಆತನ ಕೃಪೆಯಿಂದ ರಕ್ಷಿಸಲ್ಪಡುವಾಗ, ದೇವರು ಅವರನ್ನು ಸಭೆಗೆ ಸೇರಿಸುವನು (ಅ. ಕೃ. 2:38, 41, 47[11]). ಸಭೆಯು ಯೇಸುವಿನ ರಕ್ತದಿಂದಾದ ರಕ್ಷಿಸಲ್ಪಟ್ಟ ಜನರ ದೇಹವಾಗಿದೆ. ಹಿಂದಿನ ಪಾಪಗಳಿಂದ ರಕ್ಷಣೆ ಹಾಗೂ ಪರಲೋಕದ ನಿರೀಕ್ಷೆಯು ಅತೀ ಹೆಚ್ಚು ಬೆಲೆಯುಳ್ಳದ್ದು, ಅತೀ ಹೆಚ್ಚು ಅಮೂಲ್ಯವಾದದ್ದು, ಲೋಕದಲ್ಲೆಲ್ಲ ಅಪೇಕ್ಷಿಸುವ ಸಂಗತಿಯೂ ಆಗಿದೆ ಎಂದು ನಿಶ್ಚಯವಾಗಿ ಎಲ್ಲರೂ ಒಪ್ಪಿಕೊಳ್ಳುವರು.

ಸಭೆಯನ್ನು ದೇವರಿಂದಲೂ ಆತನ ಸಿಂಹಾಸನದಿಂದಲೂ ಬೇರೆ ಮಾಡಲಿಕ್ಕಾಗುವದಿಲ್ಲ, ಯಾಕಂದರೆ ಯೇಸು ಈ ಸಾಮ್ಯಗಳಲ್ಲಿ ಉಪಯೋಗಿಸಿದ ಮಾತುಗಳು "ಪರಲೋಕ ರಾಜ್ಯ" ಹಾಗೂ "ದೇವರ ರಾಜ್ಯ." ಬೇರೆ ಮಾತುಗಳಲ್ಲಿ, "ಹೂಳಿಟ್ಟ ನಿಧಿಯು" ಇಲ್ಲವೇ "ಬಹು ಬೆಲೆಯುಳ್ಳ ಮುತ್ತಿನ" ಬಗ್ಗೆ ಮಾತಾಡುವಾಗ, ಆತ್ಮಿಕ ನಿಧಿಗಳ ಬಗ್ಗೆ ಮಾತಾಡುತ್ತೇವೆ: ಸತ್ಯ, ಯೇಸು, ರಕ್ಷಣೆ, ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟ ಜನರ ಅನ್ಯೋನ್ಯತೆ, (ಸಭೆ ಎಂದು ಕರೆಯಲಾಗಿದೆ), ದೇವರೊಂದಿಗೆ ಅನ್ಯೋನ್ಯತೆ, ಪರಲೋಕದ ನಿರೀಕ್ಷೆ. ಸಭೆ ಇಲ್ಲವೇ ರಾಜ್ಯದ ಮೇಲೆ ಹೊಸ ಒಡಂಬಡಿಕೆಯ ಬೋಧನೆಯಿಂದ ಇವುಗಳಲ್ಲಿ ಯಾವುದನ್ನು ಬೇರೆ ಮಾಡಲಿಕ್ಕಾಗುವದಿಲ್ಲ. ಈ ಆತ್ಮಿಕ ವಾಸ್ತವಿಕತೆಗಳು ಬಹು ಬೆಲೆಯುಳ್ಳವುಗಳೂ ಬಹು ಶ್ರೇಷ್ಠವಾದವುಗಳೂ ಲೋಕದಲ್ಲೆಲ್ಲಾ ಬಹಳವಾಗಿ ಅಪೇಕ್ಷಿಸಲ್ಪಟ್ಟ ಸಂಗತಿಗಳೂ ಆಗಿವೆ.

ಲೋಕವು ಒಪ್ಪಿಕೊಳ್ಳುವದಿಲ್ಲ. ಜಗತ್ತಿನಲ್ಲಿಯ ಜನರಿಗೆ ಅತೀ ಅಮೂಲ್ಯವಾದದ್ದು ಯಾವುದೆಂದು ಕೇಳಿದರೆ ಅನೇಕರು "ಪ್ರಸಿದ್ಧಿ" ಎಂದು ಉತ್ತರ ಕೊಡುವರು. ಕೀರ್ತಿಯ ಮಟ್ಟದಲ್ಲಿ ಇರುವದನ್ನು ಸ್ತ್ರೀ ಪುರುಷರು ಬಯಸುವರು. "ನಾನು ಜೀವಿಸಿದ

ವರ್ಷಗಳ ಅವಲೋಕನದಲ್ಲಿ, ಇದು ನನ್ನ ಅತೀ ಪ್ರಾಮುಖ್ಯವಾದ ದಿನವಾಗಿದೆ" ಎಂದು ಹೇಳುವರು. ಐಶ್ವರ್ಯ ಮತ್ತು ಬಲಗಳು ನಿಜವಾಗಿಯೂ ಪ್ರಾಮುಖ್ಯವಾದ ಸಂಗತಿಗಳೆಂದು ಬೇರೆಯವರು ಉತ್ತರ ಕೊಡುವರು.

ಜಗತ್ತಿನ ಮೌಲ್ಯದ ಪದ್ಧತಿಗಳಲ್ಲಿ ಸಿಕ್ಕಿಕೊಳ್ಳದಿರುವುದು ಕಠಿಣವಾದದ್ದಾಗಿದೆ. ವಿಶಾಲವಾದ ಕೋಣೆಯನ್ನು ಕಲ್ಪಿಸಿಕೊಳ್ಳಿರಿ. ಒಂದು ಗೋಡೆಗೆ ಅನೇಕ ಬಾಗಿಲುಗಳಿವೆ.[12] ಒಂದು ಬಾಗಿಲಿನ ಮೇಲೆ "ಪ್ರಸಿದ್ಧಿ" ಎಂದು ಬರೆದಿದೆ. ಇನ್ನೊಂದರ ಮೇಲೆ "ಬಲ" ಎಂದು, ಮತ್ತೊಂದರ ಮೇಲೆ "ಐಶ್ವರ್ಯ," ಇನ್ನೊಂದರ ಮೇಲೆ "ಪ್ರಖ್ಯಾತಿ" ಎಂದು ಬರೆದಿದೆ. ಈ ಬಾಗಿಲುಗಳ ಮುಂದೆ ಜನರ ದೊಡ್ಡ ಸಾಲುಗಳಿದ್ದು ಅಧಿಕಾರಕ್ಕಾಗಿ ಒಬ್ಬರಿಗೊಬ್ಬರು ಒತ್ತುತ್ತ ಸಾಲಿನಲ್ಲಿ ಮುಂದೆ ಮೊದಲು ನಿಲ್ಲಲು ಪ್ರಯತ್ನಿಸುತ್ತಿರುತ್ತಾರೆ. ವಿರುದ್ಧ ದಿಕ್ಕಿನಲ್ಲಿಯ ಗೋಡೆಯ ಮೇಲೆ ಗಮನಿಸದ ಮೂಲೆಯಲ್ಲಿ ಕಾಣದ ರೀತಿಯಲ್ಲಿ ಒಂದು ಚಿಕ್ಕ ಬೋರ್ಡ ಇದೆ. "ಪರಲೋಕ ರಾಜ್ಯ" ಎಂದು ಅದರಲ್ಲಿ ಬರೆದಿದೆ. ಈ ಬಾಗಿಲಿನ ಮುಂದೆ ಕೆಲವೇ ಜನರಿರುವರು.[13] ಆ ಸ್ವಲ್ಪ ಜನರಲ್ಲಿ ನೀವಿದ್ದರೆ, ಬೇರೆ ಬಾಗಿಲುಗಳ ಕಡೆಗೆ ಹಾಗೂ ಅವುಗಳ ಮುಂದೆ ಇರುವ ಜನರ ಕಡೆಗೆ ನೋಡದೇ ಇರುವುದು ಕಠಿಣವಾಗುತ್ತದೆ. ಅವರು ಯಾವುದೋ ಮಹತ್ವವಾದದ್ದನ್ನು ಕಳೆದು ಕೊಂಡಿರಬೇಕೆಂದು ಆಶ್ಚರ್ಯಪಡುವಿರಿ.

ನಾವು ಅಧ್ಯಯನ ಮಾಡುವ ಎರಡು ಸಾಮ್ಯಗಳಲ್ಲಿಯ ಯೇಸುವಿನ ಸಂದೇಶಗಳನ್ನು ಕಲಿತುಕೊಳ್ಳಿರಿ: ಲೋಕದ ಜಯದ ಬಾಗಿಲಿನ ಕಡೆಗೆ ಎಷ್ಟು ಜನರು ಸಾಲಾಗಿ ನಿಂತು ಕೊಂಡದ್ದನ್ನು ಯೋಚಿಸದೇ, ನಿಜವಾಗಿಯೂ ಬೆಲೆಯುಳ್ಳದ್ದು ದೇವರ ರಾಜ್ಯ ಎಂದು ತಿಳಿಯಿರಿ. ಸಾಮ್ಯಗಳಲ್ಲಿ ಇಬ್ಬರು ಮನುಷ್ಯರು ನೋಡಿದಾಗ ಅದು ನಿಜವಾಗಿಯೂ ಬೆಲೆಯುಳ್ಳದೆಂದು ಗಮನಿಸಿದರು. ಹೀಗೆ ಅದನ್ನು ಹೊಂದಿ ಕೊಳ್ಳಲು ಕ್ರಯಕೊಡಲು ಅವರು ಸಿದ್ಧರಾಗಿದ್ದರು.

## ರಾಜ್ಯದ ಬೆಲೆ

ನಾವು ಈ ಪ್ರಶ್ನೆ ಕೇಳಿಕೊಳ್ಳುವ ಅಗತ್ಯತೆಯಿದೆ: "ಪರಲೋಕ ರಾಜ್ಯವು ಎಷ್ಟು ಅದ್ಭುತವಾದದ್ದು, ಎಷ್ಟು ಬೆಲೆಕಟ್ಟಲಾಗದ್ದು, ಎಷ್ಟು ಅದ್ಭುತವಾದದ್ದು, ಎಷ್ಟು ಮೌಲ್ಯವಾದದ್ದು ಎಂದು ನಾವು ಅರ್ಥಮಾಡಿಕೊಂಡಿರುವೆವು?"

ನಮ್ಮ ವಾಕ್ಯ ಭಾಗವು ಆ ಪ್ರಶ್ನೆಗೆ ನಾವು ಹೇಗೆ ಉತ್ತರ ಕೊಡಬಹುದೆಂದು ಹೇಳುತ್ತದೆ. ಮತ್ತಾಯ 13:44-46ರಲ್ಲಿಯ ಯೇಸುವಿನ ಮಾತುಗಳನ್ನು ಪುನಃ ನೋಡಿರಿ ಹಾಗೂ ನಿಮ್ಮ ಮನಸ್ಸಿನಲ್ಲಿ ಹಲವಾರು ಭಾಗಗಳನ್ನು ಗುರುತಿಸಿಕೊಳ್ಳಿರಿ:

> ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆಯಾಗಿದೆ; ಒಬ್ಬನು ಅದನ್ನು ಕಂಡು ಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡು ಕೊಂಡನು.
>
> ಮತ್ತು ಪರಲೋಕ ರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪರಸ್ಥನಿಗೆ ಹೋಲಿಕೆಯಾಗಿದೆ. ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು ತನ್ನ ಬದುಕನ್ನೆಲ್ಲಾ ಮಾರಿ ಬಂದು ಅದನ್ನು ಕೊಂಡು ಕೊಂಡನು.

ಅವುಗಳನ್ನು ಹೊಂದಿಕೊಳ್ಳಲು ನಾವು ತ್ಯಾಗ ಮಾಡಲು ಸಿದ್ಧವಾಗಿರುವಂಥವುಗಳಿಂದ ಆತ್ಮಿಕ ವಾಸ್ತವಿಕತೆಗಳ ಮೌಲ್ಯದ ಲೆಕ್ಕಾಚಾರ ತೋರಿಸುತ್ತೇವೆ. "ಯಾವನಿಗಾ

ದರೂ ನನ್ನ ಹಿಂದೆ ಬರುವದಕ್ಕೆ ಮನಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಮತ್ತಾಯ 16:24) ಎಂದು ಯೇಸು ಹೇಳಿದರು.

ಕೆಲವು ಸಂದರ್ಭಗಳಲ್ಲಿ ಸಾಮ್ಯಗಳಲ್ಲಿಯ ಮನುಷ್ಯರಂತೆ ದೇವರು ನಮ್ಮ ಮುಂದಿಡುವ ಮಾರ್ಗವನ್ನು ಅನುಸರಿಸಲು ಅಕ್ಷರಶಃವಾಗಿ ನಮಗೆ ಇರುವಂಥದ್ದೆಲ್ಲವನೂ ಮಾರಬೇಕಾಗುವುದು (ಮತ್ತಾಯ 19:21).[14] ಹೀಗಿದ್ದರೂ ನಮ್ಮಲ್ಲಿ ಹೆಚ್ಚಾದವರು, ನಮ್ಮ ಜೀವನಗಳಲ್ಲಿ ಯಾವುದು ಅತೀ ಪ್ರಾಮುಖ್ಯವಾದದ್ದು ಎಂಬುದನ್ನು ಒತ್ತಿ ಹೇಳಿ ತೋರಿಸುವೆವು. "ನೀವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕಪಡಿರಿ" (ಮತ್ತಾಯ 6:33) ಎಂದು ಯೇಸು ನಮ್ಮೆಲ್ಲರಿಗೆ ಹೇಳಿದ್ದಾರೆ. ಯೇಸುವಿನೊಂದಿಗೂ ಯೇಸುವಿನ ಸಂಗತಿಗಳೊಂದಿಗೂ (ಸಭೆಯನ್ನು ಒಳಗೊಂಡು) ಹೋಲಿಸಿದರೆ ಈ ಜೀವನದ ಸಂಗತಿಗಳು ಏನೂ ಇಲ್ಲದವುಗಳಂತೆ ಆಗ ಬೇಕಾಗುತ್ತದೆ - ಅವು ಆತ್ಮಿಕವಾದವುಗಳೊಂದಿಗೆ ಅಡ್ಡಬರುವಾಗ ಅವುಗಳನ್ನು ನಮ್ಮ ಜೀವನಗಳಿಂದ ಹೊರಗೆ ಹಾಕಬೇಕಾಗುತ್ತದೆ.

ಇರುವ ಪ್ರಶ್ನೆಯು, "ದೇವರ ರಾಜ್ಯವನ್ನು ಹೊಂದಿಕೊಳ್ಳಲು ಯಾವುದೇ ತ್ಯಾಗ ಮಾಡಲು ನಾನು ಸಿದ್ಧನಾಗಿರುವೆನೋ?" ಎಂಬುದು.

ಬಾಲ್ಯ ಪ್ರಾಯದಿಂದಲೂ ಒಬ್ಬರನ್ನೊಬ್ಬರು ತಿಳಿದು ಕೊಂಡಿದ್ದ ಇಬ್ಬರು ಪುರುಷರಿದ್ದರು. ಅನೇಕ ವರ್ಷಗಳ ನಂತರ ಅವರು ಪುನಃ ಸಂದಿಸಿದರು. ಒಬ್ಬನು ದೀನ ಕ್ರೈಸ್ತನು. ಈ ಲೋಕದ ಯಾವ ಸಂಗತಿಗಳನ್ನೂ ಸ್ವಂತಕ್ಕಾಗಿ ಹೊಂದಿಕೊಂಡಿರಲಿಲ್ಲ. ಇನ್ನೊಬ್ಬನು ಈ ಜೀವನದ ವಸ್ತುಗಳನ್ನು ಸಂಗ್ರಹಿಸುವದರಲ್ಲಿ ಐಶ್ವರ್ಯವಂತನಾಗಿ ಬೆಳೆದಿದ್ದನು.[15] ಸಂದರ್ಶಿಸಿದಾಗ ತಾವಿಬ್ಬರೂ ಒಂದೇ ಸ್ಥಿತಿಯಲ್ಲಿರುವದನ್ನು ತಿಳಿದು ಕೊಂಡರು. ಇಬ್ಬರೂ ಒಬ್ಬೊಬ್ಬ ಮಗನನ್ನು ಕಳೆದು ಕೊಂಡಿದ್ದರು.

ಐಶ್ವರ್ಯವಂತನು ತನ್ನ ಮಗನ ಮರಣದ ಬಗ್ಗೆ ಮಾತನಾಡಿದನು. ಅವನ ಜೀವನವೂ ಕನಸುಗಳೂ ಆ ಬಾಲಕನ ಸುತ್ತ ಸುತ್ತುತ್ತಿದ್ದದು ಸ್ಪಷ್ಟವಾಗಿತ್ತು. ಅವನು ಕಣ್ಣೀರು ಸುರಿಸಿದನು. "ನನ್ನ ಮಗನು ನನ್ನ ವ್ಯಾಪಾರ ಮುಂದುವರಿಸುವನೆಂದು ತಿಳಿದಿದ್ದೆನು. ಈಗ ನನಗೇನು ಮಾಡಬೇಕೆಂದು ತಿಳಿಯದು. ನನ್ನ ಜೀವನವು ಒಡೆದು ಹೋಗಿದೆ" ಎಂದು ಹೇಳಿದನು.

ಕ್ರೈಸ್ತನು ತನ್ನ ಮಗನ ಮರಣದ ಬಗ್ಗೆ ಮಾತಾಡುತ್ತಿರುವಾಗ ಹೀಗೆ ಹೇಳಿದನು: "ನನ್ನ ಹೃದಯ ಮುರಿದು ಹೋಗಿದೆ, ಆದರೆ ನಾನು ಅವನಿಲ್ಲದ್ದರ ಬಗ್ಗೆ ಬಹಳ ಯೋಚಿಸಿದರೂ, ಅವನು ಹೆಚ್ಚು ಉತ್ತಮವಾದ ಸ್ಥಳದಲ್ಲಿರುವನು ಎಂದು ತಿಳಿಯುತ್ತೇನೆ. ಈಗ ನಾನು ಅವನ ಬಳಿಗೆ ಹೋಗುವ ಸಮಯದ ವರೆಗೆ ಜೀವಿಸುವೆನು. ನಾವು ಪುನಃ ಒಂದಾಗಿ ಇರುವೆವು."

ನಿಧಿಯನ್ನು ಹೊಂದಿಕೊಳ್ಳಲು "ನಮಗಿರುವದೆಲ್ಲವನ್ನೂ ಮಾರಲು" ನಾವು ಸಿದ್ಧರಿರುವೆವೋ?

ಅನೇಕರಿಗೆ ಇದು ಅಯೋಗ್ಯವಾಗಿ ಕಂಡುಬರುತ್ತದೆ. ಆದರೆ ನಿಶ್ಚಯವಾಗಿಯೂ ಯಾವುದೂ ಹೆಚ್ಚು ಯೋಗ್ಯವಾಗಿರುವದಿಲ್ಲ. ಈ ಲೋಕದ ಅಮೂಲ್ಯ ವಸ್ತುಗಳಿರುವ ಶೋರೂಮನ್ನು ಕಲ್ಪಿಸಿ ಕೊಳ್ಳಿರಿ. ಅಂಥ ಶೋರೂಮಿನಲ್ಲಿ ನಾಲ್ಕು ಜನರು ನಡೆಯುವರು. ಒಬ್ಬನು ಬಹಳ ಐಶ್ವರ್ಯವಿರುವ ಮನುಷ್ಯ. ಒಬ್ಬನು ದುಡ್ಡಿಲ್ಲದವನು. ಉಳಿದ ಇಬ್ಬರು ಆರ್ಥಿಕವಾಗಿ ಮಧ್ಯದಲ್ಲಿರುವವರು.

ನಾವು ಶೋರೂಮಿನಲ್ಲಿ ನಡೆಯುತ್ತಿದ್ದಾಗ ಅಲ್ಲಿಯ ಹೊಳೆಯುವ ವಸ್ತುಗಳು ನಮ್ಮ

ಕಣ್ಣುಗಳಿಗೆ ಆಕರ್ಷಕವಾಗಿದ್ದವು. ನಾವು ಯಾವುದನ್ನು ಕೊಳ್ಳಲು ಶಕ್ತರಾಗುತ್ತೇವೆ, ಯಾವುದನ್ನು ಕೊಳ್ಳಲಿಕ್ಕಾಗುವದಿಲ್ಲ ಎಂಬುದನ್ನು ತಿಳಿಯಲು ಕ್ರಯ ಪಟ್ಟಿಗಳನ್ನು ನೋಡಿದೆವು. ಐಶ್ವರ್ಯವಂತನು ಎಲ್ಲವನ್ನೂ, ಅಪೇಕ್ಷಿಸಿದ್ದ ಎಲ್ಲವನ್ನೂ ಕೊಳ್ಳಬಹುದಿತ್ತು. ಬಡ ಮನುಷ್ಯನು ಯಾವುದನ್ನೂ ಕೊಳ್ಳಲು ಶಕ್ತನಾಗಿರಲಿಲ್ಲ. ಮೂರನೆಯವನೂ ಹಾಗೂ ನಾನು ಕೆಲವು ವಸ್ತುಗಳನ್ನು ಕೊಳ್ಳಲು ಸಾಧ್ಯವಿತ್ತು. ಹೆಚ್ಚಾದವುಗಳಿಗೆ ಬಹಳ ಬೆಲೆಯಿತ್ತು.

ಕೊನೆಗೆ ನಾವು ಶೋರೂಮಿನ ಕೇಂದ್ರ ಸ್ಥಳಕ್ಕೆ ಬಂದೆವು. ಅಲ್ಲಿ ನಮ್ಮ ಕಣ್ಣೆದುರಿನಲ್ಲಿ ಅಮೂಲ್ಯವಾದ ವಸ್ತುವಿತ್ತು. ಅವನ್ನು ನೂಡಿದಾಗ ನಮ್ಮ ಹೃದಯ ಬಡಿತ-ಹೆಚ್ಚಾಯಿತು. ಅದರಿಂದ ನಮ್ಮ ಕಣ್ಣುಗಳನ್ನು ಬೇರೆ ಕಡೆಗೆ ತಿರುಗಿಸದಂತಾಯಿತು, ನಾವು ಅದನ್ನು ಹೆಚ್ಚಾಗಿ ನೋಡಿದಂತೆ ಅಲ್ಲಿಯ ಉಳಿದ ವಸ್ತುಗಳು ಪ್ರಯೋಜನವಿಲ್ಲವುಗಳಂತೆ ಕಂಡವು. ಈ ಅಮೂಲ್ಯವಾದ ವಸ್ತುವನ್ನು ನೋಡಿ, ನಮ್ಮಲ್ಲಿ ಪ್ರತಿಯೊಬ್ಬರೂ ಅದನ್ನು ಪಡೆಯದಿದ್ದರೆ ನಾವೆಂದೂ ಸಂತೋಷಪಡುವದಿಲ್ಲವೆಂದು ತಿಳಿದು ಕೊಂಡೆವು. ಅದಕ್ಕೆ ಕ್ರಯಪಟ್ಟಿ ಅಂಟಿಸಿರಲಿಲ್ಲ. “ಅದರ ಬೆಲೆ ಎಷ್ಟಾಗಬಹುದು?” ಎಂದು ಒಬ್ಬರನ್ನೊಬ್ಬರು ಕೇಳಿಕೊಂಡೆವು.

ಬಡವನು ತನ್ನಲ್ಲಿದ್ದ ಹಣವನ್ನು ನೋಡಿಕೊಂಡನು. ಅವನ ಹತ್ತಿರ ಕೇವಲ ಐವತ್ತು ರೂಪಾಯಿಗಳಿದ್ದವು. “ನನ್ನಲ್ಲಿರುವುದು ಇಷ್ಟೇ” ಎಂದು ದುಃಖದಿಂದ ಹೇಳಿದ. ಎರಡನೆಯವನು ತನ್ನಲ್ಲಿರುವದನ್ನು ಎಣಿಸಿ, “ಐದು ನೂರು ರೂಪಾಯಿಗಳು” ಎಂದು ಹೇಳಿದ. ನಾನು ಸ್ವಲ್ಪ ಯೋಚಿಸಿ; “ನನಗಿರುವದನ್ನೆಲ್ಲಾ ಮಾರಿದರೆ ಬಹುಶಃ ಐವತ್ತು ಸಾವಿರ ರೂಪಾಯಿ ಆಗುವುದು” ಎಂದು ಹೇಳಿದೆನು. ಐಶ್ವರ್ಯವಂತನು “ನನ್ನ ಲೆಕ್ಕವಿಡುವವನ್ನು ನನಗಿರುವಂಥದ್ದೆಲ್ಲವನ್ನೂ ಕೂಡಿಸಿದರೆ ಐವತ್ತು ಲಕ್ಷವಾಗ ಬಹುದೆಂದು ಇಂದು ಬೆಳಗ್ಗೆ ಹೇಳಿದನು” ಎಂದು ನುಡಿದನು. ಹೀಗಿದ್ದರೂ ಅವನಿಗೆ ಸಂತೋಷವಾದಂತೆ ಕಾಣಲಿಲ್ಲ ಯಾಕಂದರೆ ಆ ಅಮೂಲ್ಯ ವಸ್ತುವಿನ ಬೆಲೆ ಅದಕ್ಕಿಂತಲೂ ಹೆಚ್ಚಾಗಿತ್ತು.

ಆ ಸಮಯದಲ್ಲಿ ಶೋರೂಮಿನ ಒಡೆಯನು ಬಂದು ಸಹಾಯ ಬೇಕೇ ಎಂದು ಕೇಳಿದನು. ನಮ್ಮಲ್ಲಿ ಸಾಕಷ್ಟು ಹಣವಿಲ್ಲದಿದ್ದರೂ “ಆ ಅಮೂಲ್ಯ ವಸ್ತುವಿನ ಬೆಲೆ ಎಷ್ಟು?” ಎಂದು ಕೇಳಿದೆವು. ಒಡೆಯನ್ನು ನಕ್ಕು ಹೀಗೆ ಹೇಳಿದನು: “ನೀವು ಅದನ್ನು ಕೊಂಡು ಕೊಳ್ಳಲಾರಿರಿ. ಅದಿರಲಿ, ನನ್ನ ಮಗನು ಕ್ರಯ ಕೊಟ್ಟಿದ್ದಾನೆ. ನೀವು ಮಾಡಬೇಕಾದದ್ದು ಸ್ವೀಕರಿಸುವದಷ್ಟೇ. ಹೀಗಿದ್ದರೂ ಅದನ್ನು ಸ್ವೀಕರಿಸುವದಕ್ಕೆ ಕ್ರಯ ಕೊಡಬೇಕಾಗುತ್ತದೆ.”

ನಮ್ಮ ಹೃದಯಗಳಲ್ಲಿ ನಿರೀಕ್ಷೆ ಹುಟ್ಟುತ್ತದೆ. ಬಹುಶಃ ಆ ಅಮೂಲ್ಯ ವಸ್ತು ನಮ್ಮದಾಗ ಬಹುದು. “ಅದಕ್ಕೆ ನಾವೆಷ್ಟು ಕ್ರಯ ಕೊಡಬೇಕಾಗಬಹುದು?” ಎಂಬ ಪ್ರಶ್ನೆ ನಮ್ಮೊಳಗೆ ಬಂದಿತು.

ಒಡೆಯನು ಬಡ ಮನುಷ್ಯನ ಕಡೆಗೆ ತಿರುಗಿ, “ನಿನ್ನಲ್ಲಿ ಎಷ್ಟು ಹಣವಿದೆ?” ಎಂದು ಕೇಳಿದನು. “ಐವತ್ತು ರೂಪಾಯಿಗಳು” ಎಂದು ಅವನು ಉತ್ತರ ಕೊಡುವನು. “ಅದಕ್ಕೆ ಅಷ್ಟೇ ಕ್ರಯವಾಗುವುದು” ಎಂದು ಒಡೆಯನು ಹೇಳುವನು.

ಮುಂದಿನವನ ಕಡೆಗೆ ತಿರುಗುವನು. “ನಿನಲ್ಲಿ ಎಷ್ಟು ಇದೆ?” “ಐದು ನೂರು ರೂಪಾಯಿಗಳು.” “ನಿನಗೆ ಅದಕ್ಕೆ ಅಷ್ಟೇ ಕ್ರಯವಾಗುವುದು.”

ಅವನು ನನ್ನ ಕಡೆಗೆ ನೋಡುವನು. “ನಿನಲ್ಲಿ ಎಷ್ಟು ಇದೆ?” “ನನ್ನಲ್ಲಿರುವ ಎಲ್ಲವನ್ನೂ ಮಾರಿದರೆ ಐವತ್ತು ಸಾವಿರ ರೂಪಾಯಿಗಳು ಬರಬಹುದು.” ಅವನು ತಲೆದೂಗಿ, “ನಿನಗೆ ಅದಕ್ಕೆ ಅಷ್ಟೇ ಕ್ರಯವಾಗುವುದು” ಎಂದು ಹೇಳುವನು.

ಕೊನಗೆ ಅವನು ಐಶ್ವರ್ಯವಂತನ ಕಡೆಗೆ ತಿರುಗುವನು. "ನಿನ್ನಲ್ಲಿ ಎಷ್ಟಿದೆ?" "ಐವತ್ತು ಲಕ್ಷ ರೂಪಾಯಿಗಳು." "ನಿನಗೆ ಅದಕ್ಕೆ ಅಷ್ಟೇ ಕ್ರಯವಾಗುವುದು."

ಅದಕ್ಕಿಂತ ಹೆಚ್ಚು ಉತ್ತಮವಾದದ್ದು ಯಾವುದು? ನಿನಲ್ಲಿ ಐವತ್ತು ರೂಪಾಯಿಗಳಿದ್ದರೆ ಇಲ್ಲವೇ ಐವತ್ತು ಲಕ್ಷ ರೂಪಾಯಿಗಳಿದ್ದರೆ ಕ್ರಯವು ಒಂದೇ ಆಗಿದೆ. ನಿನಗಿದ್ದ ಎಲ್ಲವೂ. ದೇವರು ನಮಗಿರುವದಕ್ಕಿಂತ ಹೆಚ್ಚಾದದ್ದನ್ನು ಎಂದೂ ಕೇಳುವದಿಲ್ಲ, ಆದರೆ ನಮಗಿರು ವದೆಲ್ಲವನ್ನೂ ಕೇಳುತ್ತಾನೆ.

ಕ್ರಯವು ಹೆಚ್ಚಾಯಿತೆಂದು ಲೋಕದಲ್ಲಿ ಅನೇಕರು ಯೋಚಿಸುತ್ತಾರೆ. "ನಾವು ಆ ರೀತಿಯ ತ್ಯಾಗ ಮಾಡಲಾರೆವು" ಎಂದು ಕೂಗುತ್ತಾರೆ. "ನಮಗಾಗಿ ಇಟ್ಟುಕೊಳ್ಳ ಬಯಸುವ ಸಂಗತಿಗಳು ಇವೆ. ನಮ್ಮ ಎಲ್ಲವನ್ನೂ ದೇವರಿಗೆ ಕೊಡಲಿಕ್ಕಾಗುವದಿಲ್ಲ!" ಇದು ನಿಮ್ಮ ತೀರ್ಮಾನವಾಗಿದ್ದರೆ ಹಾಗೆಯೇ ಆಗಲಿ. ಆದರೆ ಇದನ್ನು ಗಮನವಿಟ್ಟು ಯೋಚಿಸಿರಿ. ನೀವು ಆ ತ್ಯಾಗ ಮಾಡಲು ಸಿದ್ಧರಾಗಿರದಿದ್ದರೆ, ಜೀವನವು ಯಾವುದರ ಬಗ್ಗೆ ಇದೆ ಎಂಬುದನ್ನು ತಿಳಿದು ಕೊಳ್ಳುವ ಅವಕಾಶವನ್ನು ನೀವು ಕಳೆದುಕೊಳ್ಳುವಿರಿ. ಆಳವಾದ ಆಂತರಿಕ ಆನಂದ ಮತ್ತು ಮನಸ್ಸಿನ ಶಾಂತಿಯನ್ನು ಪಡುಕೊಳ್ಳುವ ನಿರೀಕ್ಷೆ ಯನ್ನು ಬಿಟ್ಟುಬಿಡುವಿರಿ. ಈ ಲೋಕವು ಕೊಡುವಂಥ ಯಾವುದೇ ಸಂಗತಿಗಿಂತಲೂ ಹೆಚ್ಚು ಅನಂತವಾಗಿ ಉತ್ತಮವಾದ ಜೀವನಕ್ಕೆ ನೀವು ಬೆನ್ನು ತಿರುಗಿಸುವಿರಿ.

ವ. 44ರಲ್ಲಿ ಒಂದು ಚಿಕ್ಕ ಮಾತನ್ನು; ನೀವು ಅದನ್ನು ತಪ್ಪಿಸಿಕೊಳ್ಳ ಬಾರದೆಂದು ಬಯಸುತ್ತೇನೆ: "ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆಯಾಗಿದೆ. ಒಬ್ಬನು ಅದನ್ನು ಕಂಡುಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲ ಮಾರಿ ಆ ಹೊಲವನ್ನು ಕೊಂಡು ಕೊಂಡನು." "ಅದರಿಂದಾದ ಸಂತೋಷ ದಿಂದ" ಆ ಮನುಷ್ಯನು "ಎಂಥಾ ತ್ಯಾಗ, ಆ ದ್ರವ್ಯವನ್ನು ಪಡೆದು ಕೊಳ್ಳಲು ನಾನು ನನ್ನ ವಾಹನವನ್ನು, ನನ್ನ ಸಾಕು ಪ್ರಾಣಿಯನ್ನು, ನನ್ನ ಹೆಂಡತಿಯ ಸುಂದರವಾದ ಹಾರವನ್ನು ಮಾರಾಟ ಮಾಡಬೇಕಾಯಿತು. ಅದು ಅತಿಯಾಯಿತು" ಎಂದು ನೀವು ಯೋಚಿಸುವಿರೋ? ಇಲ್ಲವೇ ಇಲ್ಲ! ತನ್ನ ಅಲ್ಪ ವಸ್ತುಗಳನ್ನು ಮಾರಲು ಹೋಗುತ್ತಿದ್ದಾಗ ಪ್ರತಿಯೊಂದು ಕಿವಿಗೂ ಇಂಪಾಗಿ ಹೇಳಿದಂತೆ ರಾಗ ಹಾಡುತ್ತಾ ಹೋದನೆಂದು ನಾನು ಕಲ್ಪಿಸುತ್ತೇನೆ. ಅವನು ಕೊಡುವದಕ್ಕಿಂತಲು ಎಷ್ಟೋ ಹೆಚ್ಚಾದದ್ದನ್ನು ಪಡೆದು ಕೊಳ್ಳಲಿಕ್ಕಿದ್ದನು.

ದ್ರವ್ಯವನ್ನು ಪಡೆದು ಕೊಳ್ಳುವದಕ್ಕಾಗಿ ನಮಗಿರುವ ಎಲ್ಲವನ್ನೂ ಕೊಡುವದಕ್ಕೆ ಆ ದ್ರವ್ಯದ ಅಮೂಲ್ಯತೆಯನ್ನು ಗ್ರಹಿಸಿ ಕೊಳ್ಳುವುದು ಪ್ರಧಾನವಾದದ್ದು. ಒಮ್ಮೆ ಅದರ ಬೆಲೆಯನ್ನು ನಾವು ನಿಜವಾಗಿಯೂ ಮೆಚ್ಚಿಕೊಂಡರೆ, ನಾವು ಮಾಡಬೇಕಾದ ಯಾವ ತ್ಯಾಗವು ಇಲ್ಲವೆಂದು ನಾವು ತಿಳಿದುಕೊಳ್ಳುವೆವು. ನಾವು ಮಾತಾಡುವಂಥದ್ದು ಏನೇ ಆಗಲಿ ಪ್ರತಿಯೊಂದೂ ದೇವರು ನಮಗಾಗಿ ಮಾಡುವಂಥದ್ದಕ್ಕೆ ಹೋಲಿಕೆಯಾಗಲಾರದು. ಹಿಂದಿನ ಸಮಯದಲ್ಲಿ ತನಗೆ ಅಮೂಲ್ಯವಾಗಿದ್ದ ಸಂಗತಿಗಳ ಪಟ್ಟಿ ಮಾಡಿದನಂತರ ಪೌಲನು ಫಿಲಿಪ್ಪಿಯವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾನೆ:

> ಆದರೆ ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ. ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವದೇ ಅತಿ ಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನೂ ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ (ಫಿಲಿಪ್ಪ. 3:7, 8).

## ಮುಕ್ತಾಯ

ಈ ಪಾಠದ ಶಿರೋನಾಮವನ್ನು ಮೊದಲು ನೀವು ನೋಡಿದಾಗ ಐಶ್ವರ್ಯವಂತ ಯುವ ಅಧಿಕಾರಿಯ ಬಗ್ಗೆ ಈ ಪಾಠವಿರುವದೆಂದು ಯೋಚಿಸಿದ್ದಿರಬೇಕು. ಯಾಕಂದರೆ ಆ ಕಥೆಯಲ್ಲಿ ಇದೇ ಮಾತುಗಳು ಬರುತ್ತವೆ. ಆ ಯೌವನಸ್ಥನು ಯೇಸುವಿನ ಬಳಿಗೆ ಬಂದನು. ನಿತ್ಯ ಜೀವವನ್ನು ಪಡೆಯಬೇಕಾದರೆ ಏನು ಮಾಡಬೇಕೆಂದು ಕೇಳಿದನು. "ನೀನು ಪೂರ್ಣನಾಗಬೇಕೆಂದಿದ್ದರೆ ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವುದು; ನೀನು ಬಂದು ನನ್ನನ್ನು ಹಿಂಬಾಲಿಸು" ಎಂದು ಯೇಸು ಅವನಿಗೆ ಹೇಳಿದನು (ಮತ್ತಾಯ 19:21).[16] "ನಿನಗಿರುವ ನಿರರ್ಥಕವಾದ ಸಂಗತಿಗಳನ್ನು ತೆಗೆದು ಹಾಕು. ನಿನಗೆ ದ್ರವ್ಯವು ಇರುವುದು" ಎಂದು ಇನ್ನೊಂದು ಮಾತಿನಲ್ಲಿ ಹೇಳಬಹುದು. ದುರ್ದೈವದಿಂದ, ಈ ಯುವ ಅಧಿಕಾರಿಯು ತನ್ನ ನಿರುಪಯೋಗಿ ಸಂಗತಿಗಳನ್ನು ಹೊಂದಿಕೊಂಡಿರಲು ಬಯಸಿದನು - ಆದುದರಿಂದ ಅವನು ದುಃಖದಿಂದ ಹೊರಟು ಹೋದನು.

ದ್ರವ್ಯವು ಮಾರಾಟದ ಮೇಜಿನ ಮೇಲೆ ಎಂದೂ ಇಡಲ್ಪಡುವದಿಲ್ಲ. ಅದು ಅರ್ಧ ಬೆಲೆಗೂ ದೊರೆಯುವದಿಲ್ಲ. ಕ್ರಯವು ಯಾವಾಗಲೂ ಒಂದೇ ಆಗಿರುತ್ತದೆ: ನಿನಗಿರುವ ಎಲ್ಲವೂ. ನೀನಿರುವಂಥದೆಲ್ಲವನ್ನೂ ನಿನಗಿರುವಂಥದ್ದೆಲ್ಲವನ್ನೂ ಕರ್ತನಿಗೆ ಸಮರ್ಪಿಸಲು ಸಿದ್ಧವಾಗಿದ್ದರೆ ನಿಧಿಯು (ದ್ರವ್ಯವು) ಆಶೀರ್ವಾದಗಳು ನಿನ್ನವಾಗುವವು.

---

ಟಿಪ್ಪಣಿಗಳು

[1]NASBಯಲ್ಲಿ (ಮತ್ತಾಯ 25:27) "ಬ್ಯಾಂಕ್" ಎಂದು ಕರೆಯಲ್ಪಟ್ಟ, ಬೆಲೆಯುಳ್ಳವುಗಳನ್ನು ಇಟ್ಟುಕೊಂಡು ಬಡ್ಡಿಯನ್ನೂ ಕೊಡುತ್ತಿದ್ದ ಸ್ಥಳಗಳು ಅವರಿಗಿದ್ದವು. [2]ಜನರು ತಮ್ಮ ಹಣವನ್ನು ಬ್ಯಾಂಕುಗಳಲ್ಲಿಟ್ಟು ಕೊಂಡು ಅನಂತರ ಅವರ ಹಣವನ್ನು ಹಿಂದಿರುಗಿಸದೇ ಮೋಸಮಾಡಿದ ಅನೇಕ ದೃಷ್ಟಾಂತಗಳನ್ನು ಉದಾಹರಿಸಬಹುದು. ಆದುದರಿಂದ ಜನರು ಬ್ಯಾಂಕುಗಳ ಮೇಲೆ ವಿಶ್ವಾಸವನ್ನು ಕಳೆದು ಕೊಂಡರು. ತಮ್ಮ ಹಣವನ್ನು ಡಬ್ಬಗಳಲ್ಲಿ, ಗಾದಿಗಳಲ್ಲಿ, ಇಲ್ಲವೇ ಹಿತ್ತಲದಲ್ಲಿಯ ಹಳೇ ಟಿನ್ ಕ್ಯಾನಗಳಲ್ಲಿ ಇಡುತ್ತಿದ್ದರು. (ಈ ವಿಷಯವನ್ನು ಈ ದಿನಗಳಲ್ಲಿ ಜನರು ತಮ್ಮ ಉಳಿತಾಯದ ಹಣ ಕಳದು ಕೊಂಡು ಹಾಗೂ ಸಾಲದ ಸಂಸ್ಥೆಗಳಲ್ಲಿ ಹಣ ಕಳೆದು ಕೊಂಡದ್ದಕ್ಕೆ ಹೋಲಿಸ ಬಹುದು.) [3]ಯು. ಎಸ್. ನಲ್ಲಿ ಹಿಂದಿನ ಕಾಲದಲ್ಲಿ ಜೆಸ್ಸೆ ಜೇಮ್ಸ ಎಂಬ ಪ್ರಸಿದ್ಧ ದರೋಡೆ ಕೋರನಿದ್ದನು. [4]ಈ ಕಥೆಯು ಬೇರೆ ಕ್ಷೇತ್ರಗಳಲ್ಲಿ ಬದಲಾಯಿಸಲ್ಪಡಬಹುದು. ಬಚ್ಚಿಟ್ಟ ದ್ರವ್ಯದ ಬಗ್ಗೆ ಅವರದೇ ಆದ ಕಾಲ್ಪನಿಕ ಕಥೆಗಳಿವೆ. [5]ಮೊದಲು ಮತ್ತಾಯ 13ರಲ್ಲಿ ಕಂಡು ಬಂದ ಬಿತ್ತುವವನ ಸಾಮ್ಯದಂತೆ (ಗಮನಿಸಿರಿ. ವ. 18-33) ಕೆಲವು ಅಪವಾದಗಳಿರುತ್ತವೆ. ಇವು "ನಿಯಮವನ್ನು ಸಿದ್ಧಪಡಿಸಿ ತೋರಿಸುವ ಅಪವಾದಗಳಾಗಿವೆ." [6]ಲೂಕ 18:1-8 ರಲ್ಲಿಯ ಪಟ್ಟು ಹಿಡಿದ ವಿಧವೆಯ ಸಾಮ್ಯದಂತೆ ಕೆಲವು ಸಾಮ್ಯಗಳಿಗೆ ಹಾಗೆ ಮಾಡಿದರೆ ನಾವು ತೊಂದರೆಗೊಳಗಾಗುವೆವು. ಪ್ರತಿಯೊಂದು ವಿಷಯದ ಮೇಲೆ ನಾವು ಸಮಾಂತರ ಅರ್ಥಗಳನ್ನು ತರಲು ಪ್ರಯತ್ನಿಸಿದರೆ ದೇವರನ್ನು ಮಾನವರ ಬಗ್ಗೆ ಯಾವುದೇ ಚಿಂತೆಯಿಲ್ಲದ ನ್ಯಾಯ ನಿರ್ದೇಶಕನನ್ನಾಗಿ ಮಾಡುವೆವು. [7]ಅವನು ಯೆಶಾಯ ಗ್ರಂಥವನ್ನೊಳಗೊಂಡ ಸುರುಳಿಯನ್ನು ಓದುತ್ತಿದ್ದನು. [8]ಮೂಲ ಪಠ್ಯದಲ್ಲಿ "all" (ಎಲ್ಲಾ) ಎಂಬ ಪದವು ನಪುಂಸಕ ಲಿಂಗದಲ್ಲಿದ್ದು, "ಮುತ್ತು" ಮತ್ತು "ಮುತ್ತುಗಳು" ಎಂಬ ಪದಗಳು ಪುಲ್ಲಿಂಗದಲ್ಲಿರುವವು. ಆ ವ್ಯಾಪಾರಿಯು ತನ್ನ ಮುತ್ತುಗಳನ್ನಷ್ಟೇ ಮಾರಲಿಲ್ಲ, ಆದರೆ ತನಗಿದ್ದ ಎಲ್ಲವನ್ನೂ ಮಾರಿದನೆಂದು ಸೂಚಿಸುತ್ತಾರೆ. [9]ಉಲ್ಲೇಖವು, "ಕರ್ತನೇ, ನಿನ್ನ ರಾಜ್ಯವನ್ನು ನಾನು ಪ್ರೀತಿಸುವೆ" ಎಂಬುದರಿಂದ ತೆಗೆದು ಕೊಳ್ಳಲ್ಪಟ್ಟಿದೆ. ACU Press ದಿಂದ ಅಪ್ಪಣೆಪಡೆದು ಉಪಯೋಗಿಸಲಾಗಿದೆ, © 1974.

[10]"ಬಹಳ ಬೆಲೆಯುಳ್ಳ ಮುತ್ತು" ಎಂದು ಕೆಲವು ಸಲ ಯೇಸುವು ಕರೆಯಲ್ಪಡುತ್ತಿದ್ದಾನೆ.

[11]ಇದು KJVಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಹೆಚ್ಚು ಆಧುನಿಕ ಭಾಷಾಂತರಗಳಲ್ಲಿ ಸುಮ್ಮನೆ "ಅವರಿಗೆ ಕೂಡಿಸಲ್ಪಟ್ಟರು" ಇಲ್ಲವೇ "ಅವರ ಸಂಖ್ಯೆಗೆ ಕೂಡಿಸಲ್ಪಟ್ಟರು" ಎಂದಿದೆ. ರಾಜ್ಯದ/ಸಭೆಯ ಸ್ಥಾಪನೆಯ ಬಗ್ಗೆ ಈ ಪಾಠದಲ್ಲಿ ಮೊದಲು ಕೊಡಲ್ಪಟ್ಟ ವಚನೆಗಳು ಅವರು ಕೂಡಿಸಲ್ಪಟ್ಟಿದ್ದು ರಾಜ್ಯ/ಸಭೆಗೆ ಎಂದು ನಮಗೆ ತಿಳಿಸುತ್ತದೆ. [12]ಗೋಡೆಯ ಕಡೆಗೆ ತೋರಿಸುವುದು ಇದಕ್ಕೆ ದೃಷ್ಟಾಂತವಾಗಿರುವುದು. ಹಲವಾರು ಬಾಗಿಲುಗಳಿದ್ದರೆ ಅವುಗಳ ಕಡೆಗೆ ತೋರಿಸುವುದೂ ಒಳ್ಳೆಯ ದೃಷ್ಟಾಂತವಾಗಿರುವುದು.[13]ಈ ದೃಷ್ಟಾಂತವು ಯೇಸು ಮತ್ತಾಯ 7:13, 14 ರಲ್ಲಿ ಹೆಸರಿಸಿದ ಎರಡು ಮಾರ್ಗಗಳನ್ನು ಚಿತ್ರೀಕರಿಸಲು ಇನ್ನೊಂದು ವಿಧಾನವಾಗಿದೆ. [14]ಕಳೆದು ಹೋದ ಹಾಗೂ ಸಾಯುತ್ತಿರುವ ಜಗತ್ತಿನೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳುವಲ್ಲಿ ಅನೇಕ ಮಿಶನರಿಗಳು ಇದನ್ನು ಅಕ್ಷರಶಃವಾಗಿ ಮಾಡಿದ್ದಾರೆ. [15]ಒಬ್ಬನು ತನ್ನ ಐಶ್ವರ್ಯವನ್ನು ಕಾನೂನು ಬದ್ಧವಾಗಿ ಸಂಪಾದಿಸುವಾಗ, ತನ್ನ ಪ್ರಾಧಾನ್ಯತೆಗಳನ್ನು ನೇರವಾಗಿಟ್ಟು ಕೊಳ್ಳುವಾಗ ಮತ್ತು ತನ್ನ ಆಸ್ತಿಯನ್ನು ಇತರರಿಗೆ ಆಶೀರ್ವದಿಸಲು ಉಪಯೋಗಿಸುವಾಗ, ಐಶ್ವರ್ಯವಂತರಾಗಿರುವುದರಲ್ಲಿ ಯಾವ ತಪ್ಪೂ ಇರುವದಿಲ್ಲ. ಹೀಗಿದ್ದರೂ ಕೆಲವೇ ಜನರು ಆಸ್ತಿಯನ್ನು ಸಂಪಾದಿಸಿ ತಮ್ಮ ಪ್ರಾಧಾನ್ಯತೆಯನ್ನು ಸರಿಯಾಗಿ ಇಟ್ಟುಕೊಳ್ಳುವರು ಎಂದು ಸತ್ಯವೇದವು ತೋರಿಸುತ್ತದೆ (ಮತ್ತಾಯ 19:23, 24; 1 ತಿಮೊಥಿ 6:9, 10, 17-19). ಐಶ್ವರ್ಯಗಳ ತನ್ನ ಹುಡುಕುವಿಕೆಯಲ್ಲಿ ಈ ಕಥೆಯಲ್ಲಿದ್ದ ಮನುಷ್ಯನು ಯಾವುದು ಮಹತ್ವದ್ದಾಗಿತ್ತೋ ಅದನ್ನು ಕಳೆದು ಕೊಂಡನು. [16]ಯುವಕನ ಹೃದಯದಲ್ಲಿದ್ದ ಆಶೆಯ ಬಗ್ಗೆ ಯೇಸು ಕಾರ್ಯಮಾಡುತ್ತಿದ್ದು ಅವನನ್ನು ಪೂರ್ಣಾವಧಿ ಶಿಷ್ಯತ್ವಕ್ಕೆ ಕರೆದನು. ಈ ಯುವ ಅಧಿಕಾರಿಗೆ ಹೇಳಿದ ಮಾತುಗಳು, ಪೇತ್ರ, ಅಂದ್ರೇಯರಿಗೆ, "ನಿಮ್ಮ ಬಲೆಗಳನ್ನು ಬಿಟ್ಟು ನನ್ನನ್ನು ಹಿಂಬಾಲಿಸಿರಿ" ಎಂದು ಹೇಳಿದ ಮಾತುಗಳಿಗೆ ಸಮಾನವಾಗಿವೆ.

© 2009 Truth for Today